# ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

(ನೊಂದಣಿ ಸಂಖ್ಯೆ: ಜೆ.ಆರ್.ಬಿ.:ಆರ್.ಜಿ.ಎನ್.: 69:148:2003-04)
ಪ್ರಧಾನ ಕಛೇರಿ: "ಉದಯ ಸಹಕಾರ ಭವನ", ನಂ. 29/11, 1ನೇ ಮುಖ್ಯ ರಸ್ತೆ, ಮೌಂಟ್‌ಜಾಯ್ ರಸ್ತೆ,
ಹನುಮಂತನಗರ, ಬೆಂಗಳೂರು-560 019. ದೂ.: **2662 1893, 2660 0486**

**ಸಂಖ್ಯೆ: ಉಸೌಪಸಸಂನಿ/ವಾ.ಸಾ.ಸ/2023–24** **ದಿನಾಂಕ: 02–09–2023**

## 2022–23ನೇ ಸಾಲಿನ ವಾರ್ಷಿಕ ಸಾಮಾನ್ಯಸಭೆಯ ನೋಟೀಸು

**ದಿನಾಂಕ 24–09–2023, ಭಾನುವಾರ**

**ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 28ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 24ನೇ ಸಪ್ಟೆಂಬರ್ 2023ನೇ ಭಾನುವಾರದಂದು ಬೆಳಿಗ್ಗೆ 11:00 ಗಂಟೆಗೆ ಶ್ರೀ ಗುರುನರಸಿಂಹ ಕಲ್ಯಾಣ ಮಂದಿರ, ನಂ. 12, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮದ ಎದುರು, ಬೆಂಗಳೂರು–560 004ರಲ್ಲಿ ಈ ಕೆಳಕಂಡ ಕಾರ್ಯಸೂಚಿಯಲ್ಲಿರುವಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರುಗಳು ದಯಮಾಡಿ ಈ ಸಭೆಯಲ್ಲಿ ಹಾಜರಿರಲು ಕೋರಿದೆ.**

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 28ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
4. 27ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು. ಮತ್ತು ಅಂಗೀಕರಿಸುವುದು.
5. 2022–23ನೇ ಸಾಲಿನ ವಾರ್ಷಿಕ ವರದಿಯ ಮಂಡನೆ ಮತ್ತು ಅನುಮೋದಿಸುವುದು.
6. 2022–23ನೇ ಸಾಲಿನ ಲೆಕ್ಕಪರಿಶೊಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳ ಮಂಡನೆ ಮತ್ತು ಅನುಮೋದಿಸುವುದು.
7. 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
8. 2022–23ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಮೀರಿದ ಹೆಚ್ಚುವರಿ ಖರ್ಚುಗಳ ಅನುಮೋದನೆ.
9. 2023–24ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುವುದು ಮತ್ತು ಅನುಮೋದಿಸುವುದು.
10. 2023–24ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿಗಧಿಪಡಿಸುವುದು.
11. ನಮ್ಮ ಸೌಹಾರ್ದ ಪತ್ತಿನ ಸಹಕಾರಿ ಸಂಘವನ್ನು ಸೌಹಾರ್ದ ಸಹಕಾರಿ ಸಂಘವಾಗಿ ಪರಿವರ್ತಿಸುವ ಬಗ್ಗೆ ಮತ್ತು\ ಅದಕ್ಕನುಗುಣವಾಗಿ ಉಪನಿಯಮಗಳ ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ.
12. ಸದಸ್ಯರುಗಳಿಂದ ಬಂದ ಸಲಹೆ ಸೂಚನೆಗಳು.
13. 2022–23ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ.
14. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.
15. ವಂದನಾರ್ಪಣೆ.

ಆಡಳಿತ ಮಂಡಳಿ ಅನುಮತಿ ಮೇರೆಗೆ
ಸಹಿ
ಶ್ರೀಕಾಂತ. ಜಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಉದಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು

## ಇದರ ಪ್ರಸ್ತಾವಿತ ಉಪವಿಧಿ ತಿದ್ದುಪಡಿ

| ಕ್ರ.ಸಂ. | ಉಪವಿಧಿ ಸಂಖ್ಯೆ | ಪ್ರಸ್ತುತ ಇರುವ ಪ್ರಾವಧಾನ | ಪ್ರಸ್ತಾವಿತ ಪ್ರಾವಧಾನ | ಕಾರಣ |
|---|---|---|---|---|
| 1 | **1** | **ಸಹಕಾರಿಯ ಹೆಸರು :**<br>ಸಹಕಾರಿಯ ಹೆಸರು 'ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ' ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ 'ಉದಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್' ಎಂದು ಇರತಕ್ಕದ್ದು. | **ಸಹಕಾರಿಯ ಹೆಸರು :**<br>ಸಹಕಾರಿಯ ಹೆಸರು 'ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತ' ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ 'ಉದಯ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್' ಎಂದು ಇರತಕ್ಕದ್ದು.<br>**(UDAYA SOUHARDA CO-OPERATIVE SOCIETY LIMITED)** | ಸಹಕಾರಿಯ ಹೆಸರು ಬದಲಾವಣೆ ಯಾಗುತ್ತಿರುವುದರಿಂದ |
| 2 | 4(6) | **ಸಹಕಾರಿ ಎಂದರೆ** 'ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ' ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ 'ಉದಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್' | ಸಹಕಾರಿ ಎಂದರೆ 'ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತ' ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ 'ಉದಯ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್'<br>**(UDAYA SOUHARDA CO-OPERATIVE SOCIETY LIMITED)** | ಸಹಕಾರಿಯ ಹೆಸರು ಬದಲಾವಣೆ ಯಾಗುತ್ತಿರುವುದರಿಂದ |
| 3 | 5(27) | **ಹೊಸ ಸೇರ್ಪಡೆ** | ಸದಸ್ಯರ ಮಕ್ಕಳ ಶಿಕ್ಷಣಕ್ಕಾಗಿ ಪ್ರಾಥಮಿಕ, ಪ್ರೌಢ, ಕಾಲೇಜು ಸೇರಿದಂತೆ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವುದು, ನಡೆಸುವುದು. ಅಗತ್ಯವಿದ್ದಲ್ಲಿ, ಈ ಉದ್ದೇಶಕ್ಕಾಗಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ನಿಬಂಧಕರ ಅನುಮತಿ ಪಡೆದು ಬೇರೊಂದು ಕಾಯ್ದೆಯಲ್ಲಿ ಪೂರಕ ಸಂಸ್ಥೆ ಆರಂಭಿಸುವುದು. | ಸಹಕಾರಿಯನ್ನು ಅಭಿವೃದ್ಧಿಗೊಳಿಸುವ ಹಾಗೂ ಸದಸ್ಯರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ |
| 4 | 5(28) | **ಹೊಸ ಸೇರ್ಪಡೆ** | ಸದಸ್ಯರ ಉಪಯೋಗಕ್ಕಾಗಿ ಸಮುದಾಯ ಭವನಗಳನ್ನು ಆರಂಭಿಸುವುದು. | ಸಹಕಾರಿಯನ್ನು ಅಭಿವೃದ್ಧಿಗೊಳಿಸುವ ಹಾಗೂ ಸದಸ್ಯರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ |

| ಕ್ರ.ಸಂ. | ಉಪವಿಧಿ ಸಂಖ್ಯೆ | ಪ್ರಸ್ತುತ ಇರುವ ಪ್ರಾವಧಾನ | ಪ್ರಸ್ತಾವಿತ ಪ್ರಾವಧಾನ | ಕಾರಣ |
|---|---|---|---|---|
| 5 | 5(29) | **ಹೊಸ ಸೇರ್ಪಡೆ** | ಸದಸ್ಯರ ಹಾಗೂ ಸದಸ್ಯರ ಮಕ್ಕಳ ಅನುಕೂಲಕ್ಕಾಗಿ ಪಾವತಿ ಆಧಾರಿತ, ಅತಿಥಿಗೃಹಗಳನ್ನು, ವಿದ್ಯಾರ್ಥಿ ನಿಲಯಗಳನ್ನು, ವೃದ್ಧಾಶ್ರಮಗಳನ್ನು ಆರಂಭಿಸುವುದು, ನಡೆಸುವುದು. | ಸಹಕಾರಿಯನ್ನು ಅಭಿವೃದ್ಧಿಗೊಳಿಸುವ ಹಾಗೂ ಸದಸ್ಯರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ |
| 6 | 5(30) | **ಹೊಸ ಸೇರ್ಪಡೆ** | ಸದಸ್ಯರ ಉಪಯೋಗಕ್ಕಾಗಿ ಅಂಬ್ಯೂಲೆನ್ಸ್ ಸೇವೆ ಒದಗಿಸುವುದು, ಜನೌಷಧಿ ಕೇಂದ್ರಗಳನ್ನು ನಡೆಸುವುದು, ಡಯಾಲಿಸಿಸ್ ಕೇಂದ್ರಗಳನ್ನು ನಡೆಸುವುದು, ಡಯಗ್ನಾಸ್ಟಿಕ್ ಕೇಂದ್ರಗಳನ್ನು ನಡೆಸುವುದು ಸೇರಿದಂತೆ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು. | ಸಹಕಾರಿಯನ್ನು ಅಭಿವೃದ್ಧಿಗೊಳಿಸುವ ಹಾಗೂ ಸದಸ್ಯರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ |
| 7 | 5(31) | **ಹೊಸ ಸೇರ್ಪಡೆ** | ಜಂಟಿ ಸಹಭಾಗಿತ್ವದಲ್ಲಿ ನಿರ್ಮಾಣ–ನಿರ್ವಹಣೆ–ಹಸ್ತಾಂತರ ರೀತಿಯ ಯೋಜನೆಗಳಲ್ಲಿ ಒಪ್ಪಂದಗಳನ್ನು ಮಾಡಿಕೊಳ್ಳುವುದು, ಕಟ್ಟಡಗಳನ್ನು ನಿರ್ಮಿಸುವುದು, ನಿರ್ವಹಣೆ ಮಾಡುವುದು, ಬಾಡಿಗೆಗೆ ನೀಡುವುದು, ಒಪ್ಪಂದ ಮುಕ್ತಾಯದ ನಂತರ ಹಸ್ತಾಂತರಿಸುವುದು. | ಸಹಕಾರಿಯನ್ನು ಅಭಿವೃದ್ಧಿಗೊಳಿಸುವ ಹಾಗೂ ಸದಸ್ಯರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ |

# ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

(ನೊಂದಣಿ ಸಂಖ್ಯೆ: ಜೆ.ಆರ್.ಬಿ.:ಆರ್.ಜಿ.ಎನ್.: 69:148:2003-04)

ನಂ.29/11, "ಉದಯ ಸಹಕಾರ ಭವನ", 1ನೇ ಮುಖ್ಯ ರಸ್ತೆ, ಮೌಂಟ್ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-560 019
e-mail :udayavithal@gmail.com. Ph: 080-26621893, 080-26600486, 080-26614950.


## 2021-22ನೇ ಸಾಲಿನ 27ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳು

ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 2021-22ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ: 31-07-2022ನೇ ಭಾನುವಾರ ಮಧ್ಯಾಹ್ನ 02:30ಗಂಟೆಗೆ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (TOWN HALL) ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಗುಂಡುರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಹಕಾರಿಯ ನಿರ್ದೇಶಕರಾದ ಶ್ರೀಮತಿ ರಶ್ಮಿ ಕೃಷ್ಣರಾಜ್‌ರವರ ನಿರೂಪಣೆಯೊಂದಿಗೆ ಸಭೆಯು ಪ್ರಾರಂಭವಾಯಿತು.

ಸಭೆಯಲ್ಲಿ 1046 ಸದಸ್ಯರುಗಳು ಹಾಜರಿದ್ದು ಹಾಜರಿ ಪುಸ್ತಕದಲ್ಲಿ ಸಹಿ ಮಾಡಿರುತ್ತಾರೆ.

**ವಿಷಯ-01** : ಪ್ರಾರ್ಥನೆ: ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಶೋಭ ಶೇಷಾದ್ರಿರವರು ದೇವರನ್ನು ಸ್ತುತಿಸುವ ಮೂಲಕ ಪ್ರಾರ್ಥನೆ ಸಲ್ಲಿಸಿದರು.

**ವಿಷಯ-02** : ಸ್ವಾಗತ ಭಾಷಣ: ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಲಕ್ಷ್ಮೀ ಶ್ರೀನಿವಾಸ್‌ರವರು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

**2021-22ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳು:**

**ವಿಷಯ 03** : 2021-22ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀ ಬಸವರಾಜೇಗೌಡರವರು 2021-22ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್ ಮತ್ತು ಅದರಲ್ಲಿನ ಕಾರ್ಯಸೂಚಿಯನ್ನು ಸಭೆಯಲ್ಲಿ ಓದಿದರು.

ನಿರ್ಣಯ : 27ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಸಭೆಯು ಸರ್ವಾನುಮತದಿಂದ ನಿರ್ಣಯಿಸುವ ಮೂಲಕ ದಾಖಲು ಮಾಡಲಾಯಿತು.

**ವಿಷಯ 04** : 26ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು ಮತ್ತು ಅಂಗೀಕರಿಸುವುದು.

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀ ತ್ಯಾಗರಾಜ.ವಿ.ರವರು ದಿನಾಂಕ: 11-12-2021ರಂದು ನಡೆದ 2020-21ನೇ ಸಾಲಿನ 26ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿದರು.

ನಿರ್ಣಯ : 26ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸುವ ಮೂಲಕ ಅಂಗೀಕರಿಸಲಾಯಿತು.

**ವಿಷಯ 05** : 2021-22ನೇ ಸಾಲಿನ ವಾರ್ಷಿಕ ವರದಿಯ ಮಂಡನೆ ಮತ್ತು ಅನುಮೋದಿಸುವುದು.

ವಾರ್ಷಿಕ ವರದಿಯನ್ನು ಮಂಡಿಸುವ ಮೊದಲು ವರದಿ ಸಾಲಿನಲ್ಲಿ ನಿಧನರಾದ ಸದಸ್ಯರುಗಳ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷ ಮೌನಾಚರಣೆ ಸಲ್ಲಿಸಲಾಯಿತು.

**ನಡವಳಿ** : ಸಹಕಾರಿಯ ನಿರ್ದೇಶಕರಾದ ಶ್ರೀ ಹರೀಶ್. ಬಿ.ಎಸ್.ರವರು 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಓದುವ ಮೂಲಕ ಸಭೆಯಲ್ಲಿ ಮಂಡಿಸಿದರು.

ನಿರ್ಣಯ : ಸಭೆಯು ಸರ್ವಾನುಮತದಿಂದ 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿತು.

**ವಿಷಯ 06** : 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಗಣಿಸಿ ಅನುಮೋದಿಸುವುದು.

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀ ಸತ್ಯನಾರಾಯಣ.ಸಿ.ರವರು 2021–22ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಲೆಕ್ಕ ಪತ್ರಗಳಾದ ಜಮಾ–ಖರ್ಚು ತಃಖ್ತೆ, ಲಾಭ–ನಷ್ಠ ತಃಖ್ತೆ, ಆಸ್ತಿ–ಜವಾಬ್ದಾರಿ ತಃಖ್ತೆ ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ಓದುವ ಮೂಲಕ ಸಭೆಯಲ್ಲಿ ಮಂಡಿಸಿ ಚರ್ಚೆಗೆ ಅವಕಾಶ ನೀಡಿದರು.

ಚರ್ಚೆ : ಸಹಕಾರಿಯ ಸದಸ್ಯರಾದ ಶ್ರೀ ನಾರಾಯಣ್. ಎಸ್. ಸ.ಸಂ. 233895ರವರು ಮಾತನಾಡುತ್ತಾ, ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಬಸವೇಶ್ವರ ಸುದ್ದಿ ಮಾಧ್ಯಮದ ಷೇರು ರೂ. ಒಂದು ಲಕ್ಷ ಎಂದು ಇರುತ್ತದೆ. ಇದರಿಂದ ಬರುವ ಡಿವಿಡೆಂಡ್ ಆದಾಯವನ್ನು ಯಾವ ಖಾತೆಯಲ್ಲಿ ತೋರಿಸಿರುತ್ತೀರಾ? ಎಂದು ಕೇಳಿದರು.

ವಿವರಣೆ : ಇದಕ್ಕುತ್ತರವಾಗಿ ಸಿ.ಇ.ಓ.ರವರು ಬಸವೇಶ್ವರ ಸುದ್ದಿ ಮಾಧ್ಯಮದ ಷೇರು ಬಂಡವಾಳದಿಂದ ಬರುವ ಡಿವಿಡೆಂಡ್ ಹಣವನ್ನು ಲಾಭ–ನಷ್ಟ ತಃಖ್ತೆಯ ಆದಾಯದ ವಿಭಾಗದಲ್ಲಿ ಹೂಡಿಕೆಗಳಿಂದ ಬಂದ ಆದಾಯದಲ್ಲಿ ಸೇರಿಸಿ ಕಾಣಿಸಲಾಗಿದೆ ಎಂದು ವಿವರಿಸಿದರು.

ನಿರ್ಣಯ : 2020–21ನೇ ಸಾಲಿನ ಲೆಕ್ಕ ಪತ್ರಗಳಾದ ಜಮಾ–ಖರ್ಚು ತಃಖ್ತೆ, ಲಾಭ–ನಷ್ಠ ತಃಖ್ತೆ, ಆಸ್ತಿ–ಜವಾಬ್ದಾರಿ ತಃಖ್ತೆ ಮತ್ತು ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ಇನ್ನಾವುದೇ ಚರ್ಚೆಯ ವಿಷಯಗಳು ಬಾರದಿದ್ದರಿಂದ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಗಣಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 07** : 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀ ಜಯರಾಮ್. ಸಿ.ಆರ್.ರವರು 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕ್ರಮ ಸಂಖ್ಯೆ : 35ರಲ್ಲಿ ಸೂಚಿಸಿರುವಂತೆ ಕ್ರಮವಿಡಬೇಕಾದ ಕಂಡಿಕೆಗಳ ಅನುಪಾಲನಾ ವರದಿಯನ್ನು ಈ ಕೆಳಗಿನಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೇಳಿದರು.

| ಕ್ರ.ಸಂ | ನ್ಯೂನತೆಯ ಸಂಕ್ಷಿಪ್ತ ವಿವರ | ಅನುಪಾಲನಾ ವರದಿ |
|---|---|---|
| 1. | ಮುದ್ದತ್ತು ಮೀರಿದ ಸಾಲದ ವಸೂಲಾತಿಗಾಗಿ ಕಾನೂನು ಕ್ರಮ. | ವರದಿ ಸಾಲಿನ ಅಂತ್ಯಕ್ಕೆ ಇರುವ ಮುದ್ದತು ಮೀರಿದ ಸಾಲದ ಸದಸ್ಯರುಗಳಲ್ಲಿ ಕೆಲವು ಸದಸ್ಯರು ನಿಯಮಿತವಾಗಿ ಬಡ್ಡಿಯನ್ನು ಮತ್ತು ಕೆಲವು ಸದಸ್ಯರು ಭಾಗಶಃ ಅಸಲನ್ನು ಪಾವತಿಸುತ್ತಿರುತ್ತಾರೆ. ಇನ್ನೂ ಕೆಲವು ಸದಸ್ಯರು ಬಡ್ಡಿಯನ್ನೂ ಸಹ ಪಾವತಿಸದೇ ಇರುವುದರಿಂದ, ಈಗಾಗಲೇ ಕೆಲವೊಂದು ಸುಸ್ತಿದಾರರ ವಿರುದ್ಧ ನ್ಯಾಯಾಲಯದಲ್ಲಿ ವಸೂಲಾತಿಗಾಗಿ ದಾವೆ ಹೂಡಲಾಗಿದೆ. ಇನ್ನೂ ಕೆಲವು ಸದಸ್ಯರಿಂದ ಸಾಲ ವಸೂಲಾತಿಗಾಗಿ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಕಾನೂನು ಕ್ರಮ ಕೈಗೊಳ್ಳಲು ಕ್ರಮವಿಡಲಾಗಿದೆ |
| 2. | ವರದಿ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಆದ ಖರ್ಚುಗಳಿಗೆ ಮಹಾಸಭೆಯ ಅನುಮೋದನೆ. | ಇಂದಿನ ಮಹಾಸಭೆಯ ಕಾರ್ಯಸೂಚಿ ವಿಷಯ ಸಂಖ್ಯೆ 8ರಲ್ಲಿ ಕಾರಣಗಳ ಸಹಿತ ವಿವರಿಸಿ ಅನುಮೋದನೆ ಪಡೆಯಲು ಕ್ರಮವಿಡಲಾಗಿದೆ. |

| ಕ್ರ.ಸಂ | ನ್ಯೂನತೆಯ ಸಂಕ್ಷಿಪ್ತ ವಿವರ | ಅನುಪಾಲನಾ ವರದಿ |
|---|---|---|
| 3. | ವಿತರಣೆಯಾಗದ ಮೂರು ವರ್ಷ ಮೀರಿದ ಲಾಭಾಂಶದ (ಡಿವಿಡೆಂಡ್) ಕುರಿತು. | ಡಿವಿಡೆಂಡ್ ಪಡೆಯದ ಸದಸ್ಯರಿಗೆ ಈಗಾಗಲೇ ಮಾಹಿತಿ ನೀಡಲಾಗಿದ್ದು ಕೆಲವರು ಪಡೆದಿರುತ್ತಾರೆ. ಇನ್ನೂ ಬಾಕಿ ಇರುವ ಮೂರು ವರ್ಷ ಮೀರಿದ ಡಿವಿಡೆಂಡ್ ಹಣವನ್ನು ಪಾವತಿಸಲು ಅಥವಾ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲು 2022–23ನೇ ಸಾಲಿನಲ್ಲಿ ಕ್ರಮವಿಡಲಾಗಿದೆ. |

ನಿರ್ಣಯ : 2021–22ನೇ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 08** : 2021–22ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಮೀರಿದ ಹೆಚ್ಚುವರಿ ಖರ್ಚುಗಳ ಅನುಮೋದನೆ.

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೋಭ ಶೇಷಾದ್ರಿರವರು 2021–22ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಮೀರಿದ ಹೆಚ್ಚುವರಿ ಖರ್ಚುಗಳ ಕಾರಣಗಳನ್ನು ಈ ಕೆಳಕಂಡಂತೆ ವಿವರಿಸಿ ಸಭೆಯ ಅನುಮೋದನೆ ಕೇಳಿದರು.

| ಕ್ರ.ಸಂ | ವೆಚ್ಚದ ವಿವರ | ಹೆಚ್ಚುವರಿ ರೂ | ಅಂದಾಜಿಗಿಂತ ಖರ್ಚು ಹೆಚ್ಚಿಗೆ ಆಗಲು ಕಾರಣ |
|---|---|---|---|
| 1 | ಸಿಬ್ಬಂದಿ ಸಂಬಳ | 2,55,236 | ಸಿಬ್ಬಂದಿ ಪದೋನ್ನತಿ, ಹೊಸ ಸಿಬ್ಬಂದಿಗಳ ನೇಮಕಾತಿ ಮತ್ತು ಕೆಲವು ಸಿಬ್ಬಂದಿಗಳಿಗೆ ಕ್ರೂಢೀಕೃತ ವೇತನದಿಂದ ವೇತನ ಶ್ರೇಣಿ ಅಳವಡಿಸಿರುವುದರಿಂದ ಅಂದಾಜಿಗಿಂತ ಜಾಸ್ತಿಯಾಗಿರುತ್ತದೆ. |
| 2 | ತೆರಿಗೆ ಮತ್ತು ವಿಮೆ | 42,952 | ವರದಿ ಸಾಲಿನಲ್ಲಿ ಆರೋಗ್ಯ ವಿಮೆಗೆ ಕೆಲವು ಸಿಬ್ಬಂದಿಗಳನ್ನು ಸೇರ್ಪಡೆಗೊಳಿಸಲಾಗಿದೆ. ಮತ್ತು ಸಹಕಾರಿಯ ಚರಾಸ್ತಿ ಮತ್ತು ಕಟ್ಟಡದ ವಿಮೆ ಮಾಡಿಸಲಾಗಿದ್ದು ಕಳೆದ ಸಾಲಿಗಿಂತ ವಿಮೆ ಖರ್ಚು ಹೆಚ್ಚಳವಾಗಿರುತ್ತದೆ. |
| 3 | ಕಛೇರಿ ಬಾಡಿಗೆ | 5,864 | ಸಹಕಾರಿಯ ರಾಮಮೂರ್ತಿನಗರದ ಶಾಖಾ ಕಛೇರಿಯನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು ಫೆಬ್ರವರಿ 2022ರ ಅಂತ್ಯದಲ್ಲಿ ಸ್ಥಗಿತಗೊಳಿಸಲು ಯೋಜಿಸಲಾಗಿತ್ತು. ಆದರೆ ಮಾರ್ಚ್ 2022ರಲ್ಲಿ ಸ್ಥಗಿತಗೊಳಿಸಲಾದ್ದರಿಂದ ಅಂದಾಜಿಗಿಂತ ಜಾಸ್ತಿಯಾಗಿರುತ್ತದೆ |
| 4 | ಪಿಗ್ಮಿ ಕಮೀಷನ್ | 1,900 | ಪಿಗ್ಮಿ ಕಮೀಷನ್, ಪಿಗ್ಮಿ ಸಂಗ್ರಹಣೆಯ ಆಧಾರದಲ್ಲಿ ನೀಡುವುದರಿಂದ, ಪಿಗ್ಮಿ ಸಂಗ್ರಹಣೆ ಜಾಸ್ತಿಯಾದ್ದರಿಂದ ಕಮೀಷನ್ ಸಹ ಹೆಚ್ಚಳವಾಗಿರುತ್ತದೆ. |
| 5 | ಕಾನೂನು ಸಲಹಾ ವೆಚ್ಚ (Consultation) | 4,59,466 | ವರದಿ ಸಾಲಿನಲ್ಲಿ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲಾಗಿದೆ ಮತ್ತು ಶಾಖಾ ಕಛೇರಿಯ ಮೇಲ್ವಿಚಾರಕರು ಸೇವೆಯಿಂದ ನಿವೃತ್ತಿಯಾದ ನಂತರ ಅವರನ್ನು ಸಲಹೆಗಾರರನ್ನಾಗಿ ಮುಂದುವರೆಸಲಾಗಿತ್ತು. ಈ ವೆಚ್ಚಗಳು ಅನಿರೀಕ್ಷಿತವಾದ್ದರಿಂದ ಕಳೆದ ಸಾಲಿನಲ್ಲಿ ಅಂದಾಜು ಮಾಡಲಾಗಿರುವುದಿಲ್ಲ. |
| 6 | ಕಾನೂನಾತ್ಮಕ ವೆಚ್ಚ (Legal Charges) | 35,715 | ವರದಿ ಸಾಲಿನಲ್ಲಿ ಸುಸ್ತಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮತ್ತು ಅಮಲ್ಜಾರಿ ಪ್ರಕರಣ ಕೈಗೊಳ್ಳಲಾಗಿದ್ದು ಮತ್ತು ಸುಸ್ತಿದಾರರ ಆಸ್ತಿಯ ಹರಾಜು ಪ್ರಕ್ರಿಯೆ ನಡೆಸಿರುವುದರಿಂದ ಸಾಮಾನ್ಯವಾಗಿಯೇ ಅಂದಾಜಿಗಿಂತ ಹೆಚ್ಚಾಗಿರುತ್ತದೆ. |

| ಕ್ರ.ಸಂ | ವೆಚ್ಚದ ವಿವರ | ಹೆಚ್ಚುವರಿ ರೂ | ಅಂದಾಜಿಗಿಂತ ಖರ್ಚು ಹೆಚ್ಚಿಗೆ ಆಗಲು ಕಾರಣ |
|---|---|---|---|
| 7 | ಚೀಟಿ ವೆಚ್ಚ | 5,24,064 | ವರದಿ ಸಾಲಿನಲ್ಲಿ 9 ಹೊಸ ಚೀಟಿ ಗುಂಪುಗಳನ್ನು ಪ್ರಾರಂಭಿಸಲಾಗಿದೆ ಮತ್ತು 5 ಗುಂಪು ಚೀಟಿಗಳು ಮುಕ್ತಾಯವಾಗಿರುತ್ತವೆ. ಪ್ರಾರಂಭಿಕ ಮತ್ತು ಮುಕ್ತಾಯವಾದ ಚೀಟಿ ಗುಂಪುಗಳ ಖರ್ಚು ಮತ್ತು ಉತ್ತೇಜನ/ಪ್ರೋತ್ಸಾಹಧನ ಪಾವತಿಯಿಂದ ಅಂದಾಜಿಗಿಂತ ಹೆಚ್ಚಾಗಿರುತ್ತದೆ. |
| 8 | ಠೇವಣಿ ಮೇಲಿನ ಬಡ್ಡಿ (ಅವಕಾಶಗಳು) | 18,08,834 | ವರದಿ ಸಾಲಿನ ಅಂದಾಜು ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಅವಧಿ ಮೀರಿದ ಠೇವಣಿಗಳ ವಾಪಸ್ಸು ಪಡೆಯಲು ಸದಸ್ಯರಿಂದ ಬೇಡಿಕೆಯಿತ್ತು ಹಾಗಾಗಿ ಅಂದಾಜು ಕಡಿಮೆ ಮಾಡಲಾಗಿತ್ತು ಆದರೆ ಅವಧಿ ಮೀರಿದ ಠೇವಣಿಗಳನ್ನು ನವೀಕರಿಸಿದ್ದರಿಂದ ಸಹಜವಾಗಿಯೇ ಠೇವಣಿ ಮೇಲಿನ ಬಡ್ಡಿಯ ಅವಕಾಶಗಳು ಅಂದಾಜಿಗಿಂತ ಜಾಸ್ತಿಯಾಗಿರುತ್ತದೆ. |

ನಿರ್ಣಯ : ಈ ಮೇಲಿನ ಕಾರಣಗಳನ್ನು ಪರಿಗಣಿಸಿ 2021–22ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಮೀರಿದ ಹೆಚ್ಚುವರಿ ಖರ್ಚುಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 09** : ಸೌಹಾರ್ದ ಕಾಯ್ದೆ 2021ರ ತಿದ್ದುಪಡಿ ಅನ್ವಯ ಸಹಕಾರಿಯ ಉಪವಿಧಿಗಳ ತಿದ್ದುಪಡಿ ಬಗ್ಗೆ.

ನಡವಳಿ : ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ್. ಎನ್.ರವರು, 2021ರ ಅಕ್ಟೋಬರ್ ತಿಂಗಳಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಕೆಲವೊಂದು ತಿದ್ದುಪಡಿಗಳಾಗಿರುವುದರಿಂದ ಅದರ ರೀತ್ಯಾ ನಮ್ಮ ಸಹಕಾರಿಯ ಉಪನಿಯಮಗಳ ತಿದ್ದುಪಡಿ ಮಾಡಿ ಸರ್ವ ಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆದು ನಿಬಂಧಕರ ಅನುಮೋದನೆ ಪಡೆಯುವ ಅವಶ್ಯಕತೆ ಇರುತ್ತದೆ. ಇತ್ತೀಚೆಗಷ್ಟೆ ಕಾಯ್ದೆಯಲ್ಲಿ ತಿದ್ದುಪಡಿಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಗಳು ರಚನೆಯಾಗಿಲ್ಲದಿರುವುದರಿಂದ ಮತ್ತು ಕಳೆದ ಸಾಲಿನ ಸಭೆಯು ವರ್ಚುವಲ್/ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದಿದ್ದರಿಂದ ನಿಯಮಗಳ ರಚನೆಯಾದ ನಂತರ ಮುಂದಿನ ಸರ್ವ ಸದಸ್ಯರ ಸಭೆಯಲ್ಲಿ ಇದರ ಅಂಶಗಳನ್ನು ಸಮಗ್ರವಾಗಿ ವಿವರಿಸಿ ಸರ್ವ ಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆದು ಸಂಬಂದಿಸಿದ ನಿಬಂಧಕರಿಂದ ಅನುಮೋದನೆಗಾಗಿ ಮಂಡಿಸಬಹುದೆಂದು ಸರ್ವ ಸದಸ್ಯರ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು.

ಅದರಂತೆ ಈ ಸರ್ವ ಸದಸ್ಯರ ಸಭೆಯಲ್ಲಿ ಉಪನಿಯಮಗಳ ತಿದ್ದುಪಡಿಗಾಗಿ ಕಾನೂನಿನ/ಸಹಕಾರಿಯ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಂಡು ತಮ್ಮೆಲ್ಲರ ಅನುಮೋದನೆಗಾಗಿ ಇಡಲಾಗಿದೆ. ಈ ಕೆಳಕಂಡಂತೆ ಉಪವಿಧಿಗಳ ತಿದ್ದಪಡಿಯಾಗಬೇಕಿರುತ್ತದೆ. ಸಭೆಯ ಅನುಮೋದನೆಯಾದ ನಂತರ ಉಪನಿಯಮಗಳ ತಿದ್ದುಪಡಿಗಾಗಿ ಸಂಬಂಧಿಸಿದ ಪ್ರಾಧಿಕಾರದ ಒಪ್ಪಿಗೆ ಪಡೆಯಲು ಕ್ರಮ ವಹಿಸಲಾಗುವುದು. ಈ ಕೆಳಕಂಡ ಇದಕ್ಕೆ ತಮ್ಮೆಲ್ಲರ ಅನುಮೋದನೆಗಾಗಿ ಇಡಲಾಗಿದೆ ಎಂದು ವಿವರಿಸಿದರು.

| ಕ್ರ.ಸಂ | ಉಪವಿಧಿ ಸಂಖ್ಯೆ | ಹಾಲಿ ಇರುವ ಉಪವಿಧಿ | ತಿದ್ದುಪಡಿಯ ನಂತರ | ತಿದ್ದುಪಡಿಗೆ ಕಾರಣ |
|---|---|---|---|---|
| | ಅಧ್ಯಾಯ–1–1 | ಈ ಸಹಕಾರಿಯ ಹೆಸರು " ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ" ಎಂದು ಇರತಕ್ಕದ್ದು | ಸಹಕಾರಿಯ ಹೆಸರು " ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ" ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ "UDAYA SOUHARDA CREDIT CO-OPERATIVE SOCIETY LIMITED" ಎಂದು ಇರತಕ್ಕದ್ದು. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (2ನೇ (ಇ) ಪ್ರಕರಣ) ಮತ್ತು ವ್ಯವಹಾರಕ್ಕನು ಗುಣವಾಗಿ |

| | | | | |
|---|---|---|---|---|
| | **ಅಧ್ಯಾಯ–1–2–ಎ)** | ಸಹಕಾರಿಯು ನೋಂದಾಯಿತ ಕಛೇರಿಯ ವಿಳಾಸವು ನಂ:371/5, (ಹಳೇ ನಂ:372), 2ನೇ ಮಹಡಿ, 9ನೇ ಮುಖ್ಯ ರಸ್ತೆ, ಹನುಮಂತನಗರ, 50 ಅಡಿ ರಸ್ತೆ, ಬೆಂಗಳೂರು–560019 ಎಂದು ಇರತಕ್ಕದ್ದು. | ಸಹಕಾರಿಯು ನೋಂದಾಯಿತ ಕಛೇರಿಯ ವಿಳಾಸವು ನಂ. 29/11, "ಉದಯ ಸಹಕಾರ ಭವನ" 1ನೇ ಮುಖ್ಯ ರಸ್ತೆ, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು–560019 ಎಂದು ಇರತಕ್ಕದ್ದು. | ಸಹಕಾರಿಯ ಕಛೇರಿಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಿರುವುದರಿಂದ. |
| | **ಅಧ್ಯಾಯ–2–4–5** | 'ಕಾರ್ಯಕ್ಷೇತ್ರ' ಎಂದರೆ ಯಾವ ಭೌಗೋಳಿಕ ಪ್ರದೇಶದಿಂದ ಸದಸ್ಯರನ್ನು ಸೇರಿಸಿ ಕೊಳ್ಳಲಾಗುತ್ತದೆಯೋ ಅಂತಹ ನಿರ್ಧಿಷ್ಟಪಡಿಸಿದಂತಹ ಅಧಿಕಾರ ವ್ಯಾಪ್ತಿಯ ಭೌಗೋಳಿಕ ಪ್ರದೇಶ. | 'ಕಾರ್ಯಕ್ಷೇತ್ರ' ಎಂದರೆ ಸಹಕಾರಿಗಳ ನೋಂದಾಯಿತ ಉಪವಿಧಿಗಳಲ್ಲಿ ನಿರ್ಧಿಷ್ಟ ಪಡಿಸಿದಂತಹ ಅಧಿಕಾರ ವ್ಯಾಪ್ತಿಯ ಪ್ರದೇಶ. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (ಪ್ರಕರಣ–2(ಎ1)) |
| | **ಅಧ್ಯಾಯ–2–4–6** | ಸಹಕಾರಿಯ ಎಂದರೆ "ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ" | ಸಹಕಾರಿಯ ಎಂದರೆ " ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ" ಅಥವಾ ಆಂಗ್ಲ ಭಾಷೆ ತರ್ಜುಮೆಯಾಗಿ "ಉದಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್" | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (2ನೇ (ಇ) ಪ್ರಕರಣ) ಮತ್ತು ವ್ಯವಹಾರಕ್ಕನುಗುಣವಾಗಿ |
| | **ಅಧ್ಯಾಯ–3–26–ಆ** | ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸುವ ಮುಖಾಂತರ | ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸುವ ಮುಖಾಂತರ, "ಯಾವುದೇ ಇತರ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳಿಂದ ಠೇವಣಿಗಳನ್ನು ಹೊರತುಪಡಿಸಿ". | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (ಪ್ರಕರಣ–17) |
| | **ಅಧ್ಯಾಯ–4–1)–ಈ** | ಸದಸ್ಯತ್ವಕ್ಕೆ ಪ್ರವೇಶ:<br>ಹೊಸ ಸೇರ್ಪಡೆ : | ಸಹಕಾರಿಯು ಅಥವಾ ಅದರ ಹಣಕಾಸು ಬ್ಯಾಂಕಿನ ಅಥವಾ ಅದರ ಒಕ್ಕೂಟದ ಅಥವಾ ಅದರ ಸಂಯುಕ್ತ ಸಹಕಾರಿಯ ವೇತನ ಪಡೆಯುವ ಉದ್ಯೋಗಿಯಾಗಿದ್ದರೆ. ಸಹಕಾರಿಯು ಸದಸ್ಯನ್ನಾಗಿ ಸೇರಿಸಿಕೊಳ್ಳ ತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ(ಪ್ರಕರಣ–20(1)(ಜಿ) |
| | **ಅಧ್ಯಾಯ–4–9–10** | ಸಹಕಾರಿಯ ಮಹಾಸಭೆಯ ದಿನಾಂಕದಿಂದ ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಿಂದ ಒಂದು ವರ್ಷ ಪೂರ್ವದಲ್ಲಿ ಸದಸ್ಯರಾದವರಿಗೆ ಮಾತ್ರ ಸಹಕಾರಿಯ ಮಹಾ ಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಇರತಕ್ಕದ್ದು. | ಯಾರೇ ಸದಸ್ಯನು:–<br>ಎ) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ<br>ಬಿ) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ;<br>ಸಿ) (i) ಹಿಂದಿನ ಐದು ವಾರ್ಷಿಕ | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (ಪ್ರಕರಣ–20ಬಿ) |

| | | | | |
|---|---|---|---|---|
| | | | ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ;<br>(ii) ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ,<br>– ವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,<br>– ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳಿಸತಕ್ಕದ್ದು. | |
| | **ಅಧ್ಯಾಯ–7–49–1** | ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯಕ್ಕೆ ಸಹಕಾರಿಯ ಅಧ್ಯಕ್ಷರು ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು. ಯಾವುದೇ ಕಾರಣಕ್ಕೆ ಅಧ್ಯಕ್ಷರು ಪ್ರತಿನಿಧಿಸಲು ಸಾಧ್ಯವಾಗದಿದ್ದಲ್ಲಿ, ಅವರು ಮಂಡಲಿಯ ಯಾವುದೇ ನಿರ್ದೇಶಕನನ್ನು ಡೆಲಿಗೇಟ್ ಆಗಿ ನಾಮ ನಿರ್ದೇಶಿಸಬಹುದು. ಆ ಪ್ರತಿನಿಧಿಯು ಸಹಕಾರಿಯ ಪದದಲ್ಲಿರುವವರಗೂ ಅಥವಾ ಆತನು ಮಂಡಲಿಯ ಸದಸ್ಯನಾಗಿ ಆಯ್ಕೆಯಾಗಿರುವ ಅವಧಿ ಮುಗಿಯುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯ–ವರೆಗೆ ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಯನ್ನು ಪ್ರತಿನಿಧಿಸುವುದು ಮುಂದುವರೆಯುತ್ತದೆ. ಅಧ್ಯಕ್ಷರಾಗಲಿ, ಮಂಡಲಿಯಾಗಲೀ ಅವರನ್ನು ಬದಲಾಯಿಸಲು ಅವಕಾಶ ಇರುವುದಿಲ್ಲ. | ಸಂಯುಕ್ತ ಸಹಕಾರಿಯಲ್ಲಿ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸಲು ನಿರ್ಣಯದ ಮೂಲಕ ಸಹಕಾರಿ ಮಂಡಳಿಯು ಚುನಾಯಿತ ನಿರ್ದೇಶಕನನ್ನು ನಾಮನಿರ್ದೇಶನ ಮಾಡಬಹುದು. ಅಂಥ ನಾಮನಿರ್ದೇಶಿತ ನಿರ್ದೇಶಕನು ಸಂಯುಕ್ತ ಸಹಕಾರಿಯಲ್ಲಿ ಅಂಥ ನಿರ್ಣಯದೊಂದಿಗೆ ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. (ಪ್ರಕರಣ–53) |
| | **ಅಧ್ಯಾಯ– 2 ರಿಂದ 16** | ಸಹಕಾರಿಯ ಉಪವಿಧಿಗಳಲ್ಲಿ ಎಲ್ಲೆಲ್ಲಿ 'ಸಹಕಾರಿ ಚುನಾವಣಾ ಆಯೋಗ' ಎಂದು ಬಂದಿದೆಯೋ | ಅದನ್ನು 'ಸಹಕಾರಿ ಚುನಾವಣಾ ಪ್ರಾಧಿಕಾರ' ಎಂದು ತಿದ್ದುಪಡಿಯಾಗತಕ್ಕದ್ದು. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021ರ ಅನ್ವಯ. |

ನಿರ್ಣಯ : ಈ ಮೇಲಿನ ಕಾರಣಗಳನ್ನು ಪರಿಗಣಿಸಿ ಸೌಹಾರ್ದ ಕಾಯ್ದೆ 2021ರ ತಿದ್ದುಪಡಿ ಅನ್ವಯ ಸಹಕಾರಿಯ ಉಪವಿಧಿಗಳ ತಿದ್ದುಪಡಿ ಬಗ್ಗೆ ಸಹಕಾರಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 10** : 2022–23ನೇ ಸಾಲಿನ ಮುಂಗಡ ಪತ್ರ ಮಂಡನೆ, ಅಂಗೀಕಾರ

ನಡವಳಿ : ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ್.ಎನ್. ರವರು ಆಡಳಿತ ಮಂಡಳಿಯಲ್ಲಿ ಅನುಮೋದನೆಯಾದಂತಹ 2021–22ನೇ ಸಾಲಿನ ಅಂದಾಜು ಪಟ್ಟಿ ಮತ್ತು ನೈಜ ಖರ್ಚು ಮತ್ತು ಆದಾಯ ಹಾಗೂ 2022–23ನೇ ಸಾಲಿನ ಮುಂಗಡ ಪತ್ರವನ್ನು ಈ ಕೆಳಕಂಡಂತೆ ಮಂಡಿಸಿ ಸಭೆಯ ಅನುಮೋದನೆಯನ್ನು ಕೇಳಿದರು.

| **ಖರ್ಚಿನ ವಿವರಗಳು** | **2021–22 ಅಂದಾಜು ರೂ. ಲಕ್ಷಗಳಲ್ಲಿ** | **2021–22 ಖರ್ಚು ರೂ. ಲಕ್ಷಗಳಲ್ಲಿ** | **2022–23 ಅಂದಾಜು ರೂ. ಲಕ್ಷಗಳಲ್ಲಿ** |
|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 920.00 | 904.11 | 950.00 |
| ಸಿಬ್ಬಂದಿ ಸಂಬಳ | 33.50 | 36.05 | 40.00 |
| ಭವಿಷ್ಯ ನಿಧಿ–ಸಹಕಾರಿ ವಂತಿಗೆ | 4.00 | 3.98 | 4.00 |
| ಸಹಕಾರಿ ವೃತ್ತಿ ತೆರಿಗೆ ನವೀಕರಣ | 0.05 | 0.05 | 0.03 |
| ಮುದ್ರಣ ಮತ್ತು ಲೇಖನಿ | 3.00 | 1.84 | 3.00 |
| ಅಂಚೆ ಖರ್ಚು | 0.20 | 0.12 | 0.20 |
| ದೂರವಾಣಿ ವೆಚ್ಚ | 3.00 | 2.38 | 3.00 |
| ವಿದ್ಯುಚ್ಛಕ್ತಿ ವೆಚ್ಚ | 4.50 | 4.33 | 5.00 |
| ತೆರಿಗೆ ಮತ್ತು ವಿಮೆ | 3.00 | 3.43 | 5.00 |
| ಕಛೇರಿ ಬಾಡಿಗೆ | 4.00 | 4.06 | 0.34 |
| ಸಾರಿಗೆ ವೆಚ್ಚ | 5.50 | 4.81 | 6.00 |
| ದಿನಪತ್ರಿಕೆ ಮತ್ತು ನಿಯತಕಾಲಿಕೆಗಳು | 0.05 | 0.04 | 0.05 |
| ಪಿಗ್ಮಿ ಕಮೀಷನ್ | 0.30 | 0.32 | 0.40 |
| ಸರ್ವಸದಸ್ಯರ ಸಭೆ ಖರ್ಚು | 2.00 | 1.82 | 3.00 |
| ನವೀಕರಣ ಮತ್ತು ಸಂರಕ್ಷಣ ವೆಚ್ಚ | 5.00 | 4.50 | 5.00 |
| ಸಂಯುಕ್ತ ಸಹಕಾರಿ ವಾರ್ಷಿಕ ಶುಲ್ಕ | 0.60 | 0.59 | 0.60 |
| ವಿವಿಧ ಮಂಡಳಿ ಸಭೆ ಖರ್ಚು | | | 2.00 |
| ಇತರೆ ಖರ್ಚು | 5.00 | 2.40 | 5.00 |
| ಜಾಹೀರಾತು | 0.50 | 0.13 | 0.50 |
| ಕಛೇರಿ ನಿರ್ವಹಣಾ ವೆಚ್ಚ | 6.00 | 5.50 | 7.00 |
| ಕನ್ಸಲ್ಟೇಷನ್ ಚಾರ್ಜಸ್ | | 4.59 | 0.60 |
| ಪ್ರಯಾಣ ಖರ್ಚು | 2.50 | 0.67 | 2.50 |

| | | | |
|---|---|---|---|
| ಆಡಳಿತ ಮಂಡಳಿ ನಿರ್ವಹಣಾ ವೆಚ್ಚ | 17.00 | 16.64 | 20.00 |
| ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚ | 1.50 | 1.49 | 2.00 |
| ಕಾನೂನಾತ್ಮಕ ವೆಚ್ಚ | 1.50 | 1.86 | 5.00 |
| ಇಂಧನ ಮತ್ತು ಇತರೆ ಖರ್ಚು | 2.00 | 2.01 | 2.50 |
| ನೀರಿನ ವೆಚ್ಚ | 0.20 | 0.20 | 0.25 |
| ಇ-ಮುದ್ರಾಂಕ ವಿಭಾಗದ ವೆಚ್ಚ | 0.20 | 0.15 | 0.20 |
| ಚೀಟಿ ವಿಭಾಗದ ವೆಚ್ಚ | 6.00 | 11.24 | 15.00 |
| ಅವಕಾಶಗಳು (ಠೇವಣಿ ಮೇಲಿನ ಬಡ್ಡಿ) | 75.00 | 93.09 | 90.00 |
| ಲೆಕ್ಕ ಪರಿಶೋಧನಾ ಶುಲ್ಕ | 1.50 | 1.00 | 1.50 |
| ಸ್ಥಿರ, ಚರ ಆಸ್ತಿಗಳ ಮೇಲಿನ ಸವಕಳಿ | 33.00 | 29.98 | 35.00 |
| **ಒಟ್ಟು** | **1,140.60** | **1,143.38** | **1,214.67** |

ನಿರ್ಣಯ: 2022-23ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು

| ಆದಾಯದ ವಿವರಗಳು | 2021-22 ಅಂದಾಜು ರೂ. ಲಕ್ಷಗಳಲ್ಲಿ | 2021-22 ಖರ್ಚು ರೂ. ಲಕ್ಷಗಳಲ್ಲಿ | 2022-23 ಅಂದಾಜು ರೂ. ಲಕ್ಷಗಳಲ್ಲಿ |
|---|---|---|---|
| ಬಡ್ಡಿ ಸ್ವೀಕೃತಿ | 1050.00 | 1,073.69 | 1,120.00 |
| ಸಾಲಗಳ ಮೇಲಿನ ಬಡ್ಡಿ | 120.00 | 144.14 | 144.00 |
| ಹೂಡಿಕೆಗಳ ಮೇಲಿನ ಬಡ್ಡಿ | 2.50 | 6.75 | 7.00 |
| ಇತರೆ ಆದಾಯ | 0.50 | 0.56 | 0.60 |
| ಇ-ಸ್ಟಾಂಪಿಂಗ್ ಮತ್ತು ವಿಮೆ | 40.00 | 39.68 | 45.00 |
| ಚೀಟಿ ವಿಭಾಗದ ಆದಾಯ | | | |
| **ಒಟ್ಟು ಆದಾಯ** | **1,213.00** | **1,264.82** | **1,316.60** |
| **ಲಾಭ** | **72.40** | **101.42** | **101.94** |

ನಿರ್ಣಯ : 2022-23ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 11** : 2022-23ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ ಮತ್ತು ಸಂಭಾವನೆಯನ್ನು ನಿಗಧಿಪಡಿಸುವುದು.

ನಡವಳಿ : ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್. ಬಿ.ಎಸ್.ರವರು 2021-22ನೇ ಸಾಲಿನ ಲೆಕ್ಕಪರಿಶೋಧನೆಯನ್ನು M/s A.N.K.H Associatesನ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಕಮಲಾಕರ ಭಟ್‌ರವರು ನಡೆಸಿಕೊಟ್ಟಿರುತ್ತಾರೆ. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ.1997ರ 8ಬಿ (6) ರಂತೆ ಒಬ್ಬ ಲೆಕ್ಕಪರಿಶೋಧಕರು/ಲೆಕ್ಕಪರಿಶೋಧನಾ ಸಂಸ್ಥೆಯನ್ನು ಅನುಕ್ರಮವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ 2022-23ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಲು ಲೆಕ್ಕಪರಿಶೋಧನಾ ಇಲಾಖೆಯ ಪಟ್ಟಿಯಲ್ಲಿರುವ ಶ್ರೀ P.N. ರಾಜಶೇಖರ್, M/s. P.N.R&Co, ಶೇಷಾದ್ರಿಪುರಂ, ಬೆಂಗಳೂರು-20 ಇವರನ್ನು ಅಯ್ಕೆ ಮಾಡಿ

ಇವರಿಗೆ ರೂ. 1,00,000/– (ಒಂದು ಲಕ್ಷ) ಮಾತ್ರ ಸಂಭಾವನೆ ನೀಡಲು ನಿರ್ಧರಿಸಲಾಗಿದೆ. ಇದಕ್ಕೆ ಈ ಸಭೆಯ ಒಪ್ಪಿಗೆ ಬೇಕಿರುತ್ತದೆ ಎಂದು ತಿಳಿಸಿದರು.

ನಿರ್ಣಯ : ಆಡಳಿತ ಮಂಡಳಿ ಸಭೆಯು ನಿರ್ಧರಿಸಿರುವಂತೆ 2022–23ನೇ ಸಾಲಿಗೆ ಶ್ರೀ P.N. ರಾಜಶೇಖರ್, M/s. P.N.R&Co, ಶೇಷಾದ್ರಿಪುರಂ, ಬೆಂಗಳೂರು–20 ಇವರನ್ನು ಸಹಕಾರಿಯ ಲೆಕ್ಕ ಪರಿಶೋಧಕರನ್ನಾಗಿ ಆಯ್ಕೆ ಮಾಡಿ ಇವರಿಗೆ ರೂ. 1,00,000/– (ಒಂದು ಲಕ್ಷ ರೂಪಾಯಿಗಳು)ಮಾತ್ರ ಸಂಭಾವನೆ ನೀಡಬಹುದೆಂದು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ 12 : ಸದಸ್ಯರುಗಳಿಂದ ಬಂದ ಸಲಹೆ ಸೂಚನೆಗಳು.

ನಡವಳಿ : ಸಹಕಾರಿಯ ಸದಸ್ಯರುಗಳಿಂದ ಯಾವುದೇ ರೀತಿಯ ಸಲಹೆ ಸೂಚನೆ ಹಾಗೂ ಸಭೆಯಲ್ಲಿ ಚರ್ಚಿಸಲು ಲಿಖಿತ ಪತ್ರಗಳು ಬಂದಿರುವುದಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

ನಿರ್ಣಯ : ಸದಸ್ಯರಿಂದ ಈ ಸಭೆಯಲ್ಲಿ ಚರ್ಚಿಸುವ ಬಗ್ಗೆ ಯಾವುದೇ ವಿಷಯಗಳು ಲಿಖಿತವಾಗಿ ಇಲ್ಲವಾದ್ದರಿಂದ ಸಭೆಯ ಕಾರ್ಯಸೂಚಿಯಂತೆ ಕಾರ್ಯಕ್ರಮವನ್ನು ಮುಂದುವರೆಸುವಂತೆ ನಿರ್ಧರಿಸಲಾಯಿತು.

**ವಿಷಯ 13** : 2021–22ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ, ಅನುಮೋದನೆ.

ನಡವಳಿ : ಸಹಕಾರಿಯ ಅಧ್ಯಕ್ಷರು ಸಹಕಾರಿಯು 2021–22ನೇ ಸಾಲಿನಲ್ಲಿ ಗಳಿಸಿರುವ ಲಾಭ ರೂ.1,01,42,001ಗಳ ವಿಲೇವಾರಿಯನ್ನು ಈಗಾಗಲೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ ಈ ಕೆಳಗಿನಂತೆ ವಿವರಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದರು.

| **ಕ್ರ.ಸಂ** | **ವಿವರ** | **ಮೊಬಲಗು (ರೂಗಳಲ್ಲಿ)** |
|---|---|---|
| 1 | ಕಾಯ್ದಿಟ್ಟ ನಿಧಿ (25%) | 25,35,500 |
| 2 | ಸಹಕಾರ ಅಕಾಡೆಮಿ (ನೋಂ.1960) ಮೈಸೂರು (0.50%) | 50,710 |
| 3 | ಕ.ರಾ.ಸೌ.ಸಂ.ಸಹಕಾರಿ ಶಿಕ್ಷಣ ನಿಧಿ (2%) | 2,02,840 |
| 4 | ಕರಡು ಸಾಲದ ನಿಧಿ (20%) | 20,28,400 |
| 5 | ಸಾಮಾನ್ಯ ಕ್ಷೇಮ ನಿಧಿ (5%) | 5,07,101 |
| 6 | ಸಿಬ್ಬಂದಿ ಬೋನಸ್ (40 ದಿನಗಳು) | 3,18,000 |
| 7 | ಸದಸಸ್ಯರಿಗೆ ಡಿವಿಡೆಂಡ್ (ಲಾಭಾಂಶ) (11%) | 33,00,000 |
| 8 | ಮರಣೋತ್ತರ ನಿಧಿ | 1,00,000 |
| 9 | ಧರ್ಮಾರ್ಥ ನಿಧಿ | 2,00,000 |
| 10 | ಜ್ಯೂಬಿಲಿ ನಿಧಿ | 3,99,450 |
| 11 | ಸಿಬ್ಬಂದಿ ಕ್ಷೇಮ ನಿಧಿ | 2,00,000 |
| 12 | ಕಟ್ಟಡ ನಿಧಿ | 1,00,000 |
| 13 | ಆರೋಗ್ಯ ನಿಧಿ | 1,00,000 |
| 14 | ವಿದ್ಯಾ ನಿಧಿ | 1,00,000 |
| | **ಒಟ್ಟು ರೂ** | **1,01,42,001** |

ನಿರ್ಣಯ : 2021–22ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಸಭೆಯ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 14** : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

## ಅಧ್ಯಕ್ಷರ ಭಾಷಣ:

ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್ ಬಿ.ಎಸ್ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ನಮ್ಮ ಸಹಕಾರಿಯು ಕೇವಲ ಸಾಲ ನೀಡಿಕೆ, ವಸೂಲಾತಿ, ಠೇವಣಿ ಸಂಗ್ರಹಣೆ ಹಾಗೂ ಲಾಭದ ಉದ್ದೇಶವನ್ನಿಟ್ಟುಕೊಳ್ಳದೇ, ಅನೇಕ ಸಾಮಾಜಿಕ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿದೆ. ನಮ್ಮ ಸಹಕಾರಿಯು 25ನೇ ವರ್ಷದ ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ನಡೆಸಲಾಗಿದೆ.

ನಮ್ಮ ಸಹಕಾರಿಯು ಕಳೆದ 26ವರ್ಷಗಳಿಂದಲೂ ಸಹ ಪ್ರತೀ ವರ್ಷವೂ ಲಾಭ ಗಳಿಸುತ್ತಾ ಬಂದಿರುತ್ತದೆ.ಆದರೆ ಕಳೆದ ಸಾಲಿನಲ್ಲಿ ನಾವು ನಿರೀಕ್ಷಿಸಿದಷ್ಟು ಲಾಭ ಗಳಿಸಲು ಸಾದ್ಯವಾಗಿರುವುದಿಲ್ಲ. ಆದರೆ ನಮ್ಮ ಸಹಕಾರಿಯು ಈ ಸಾಲಿನಲ್ಲಿ ತುಂಬಾ ಶ್ರಮ ವಹಿಸಿ, ನಮ್ಮ ಎಲ್ಲಾ ನಿರ್ದೇಶಕರುಗಳ ಮತ್ತು ಸಿಬ್ಬಂದಿ ವರ್ಗದವರ ಸಹಕಾರದೊಂದಿಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಲಾಭವನ್ನು ಗಳಿಸಿರುತ್ತದೆ. ಎಂದು ತಿಳಿಸಿದರು.

ನಂತರ ಮುಂದುವರೆದು ಮಾತನಾಡುತ್ತಾ, ನಮ್ಮ ಸಹಕಾರಿಯು ಕಳೆದ 26 ವರ್ಷಗಳಿಂದ ಆರ್ಥಿಕವಾಗಿ ಧೃಡವಾಗಿರುತ್ತದೆ. ಸದಸ್ಯರು ಈ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ/ಗೊಂದಲಗಳಿಗೆ ಒಳಗಾಗಬೇಕಿಲ್ಲ. ನಿಮ್ಮ ಹಣ ಸುರಕ್ಷಿತವಾಗಿದ್ದು. ನಿಮಗೆ ಹಣದ ಅವಶ್ಯಕತೆ ಇದ್ದು ನಮ್ಮ ಸಂಸ್ಥೆಯಿಂದ ವಾಪಸ್ಸು ಪಡೆಯಲು ಇಚ್ಚಿಸಿದಲ್ಲಿ ಯಾವ ಸಮಯದಲ್ಲಾದರೂ ನಿಮ್ಮ ಹಣವನ್ನು ಪಡೆಯಬಹುದಾಗಿರುತ್ತದೆ ಇದರಲ್ಲಿ ಯಾವುದೇ ಸಂಶಯ ಬೇಡ. ನಮ್ಮ ಸಹಕಾರಿಯ ಹಣವನ್ನು ಒಂದೇ ಬ್ಯಾಂಕ್ನಲ್ಲಿ ಹೂಡಿಕೆ ಮಾಡದೇ ಸುಮಾರು 17 ವಿವಿಧ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂದು ತಿಳಿಸಿದರು.

ನಮ್ಮ ಸಹಕಾರಿಯ ಕಟ್ಟಡದಲ್ಲಿ ಬಹು ನಿರೀಕ್ಷಿತವಾದ ಡಯಾಗ್ನೋಸ್ಟಿಕ್ ಕೇಂದ್ರವನ್ನು ಅಪೂರ್ವ ಡಯಾಗ್ನೋಸ್ಟಿಕ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ತೆರೆಯಲಾಗಿದೆ. ಇದರಿಂದ ಸಹಕಾರಿಯ ಸದಸ್ಯರುಗಳು ಹೆಚ್ಚಿನ ಮಟ್ಟದ ರಿಯಾಯಿತಿ ದರದಲ್ಲಿ ತಮ್ಮ ದೇಹಾರೋಗ್ಯಕ್ಕೆ ಸಂಬಂದಿಸಿದ ಪರೀಕ್ಷೆಗಳನ್ನು ಮಾಡಿಸಬಹುದಾಗಿರುತ್ತದೆ. ಇದರ ಸದುಪಯೋಗವನ್ನು ಎಲ್ಲಾ ಸದಸ್ಯರುಗಳು ಪಡೆದುಕೊಳ್ಳಬೇಕಾಗಿ ಕೋರಿಕೆ ಎಂದು ತಿಳಿಸಿದರು.

ಮುಂದುವರೆದು, ಇಂದಿನ ಸಹಕಾರ ಸಂಸ್ಥೆಗಳ ಬೆಳವಣಿಗೆಗಳನ್ನು ಗಮನಿಸಿದಾಗ ನಮ್ಮ ಸಹಕಾರಿಯು ಉತ್ತಮ ಸ್ಥಿತಿಯಲ್ಲಿದೆ ಇದಕ್ಕೆ ನಮ್ಮ ಸದಸ್ಯರುಗಳೇ ಕಾರಣ. ಏಕೆಂದರೆ ನಮ್ಮ ಸದಸ್ಯರುಗಳು ಯಾವುದೇ ಭಯವಿಲ್ಲದೇ ನಮ್ಮ ಸಹಕಾರಿಯ ಆಡಳಿತ ಮಂಡಳಿಯ ಮೇಲೆ ಸಂಪೂರ್ಣವಾಗಿ ನಂಬಿಕೆ ಇಟ್ಟು ಠೇವಣಿ ಇಟ್ಟಿರುತ್ತಾರೆ. ಇದಕ್ಕೆಲ್ಲಾ ಸದಸ್ಯರುಗಳು ನಮ್ಮ ಆಡಳಿತದ ಮೇಲೆ ಇಟ್ಟಿರುವ ಭರವಸೆಯೇ ಕಾರಣ ಎಂದು ತಿಳಿಸಿದರು.

ಇದುವರೆಗೂ ಶಾಂತ ರೀತಿಯಿಂದ ಬೆಳಗಿನ ಬೆಳ್ಳಿ ಹಬ್ಬದ ಸಂಭ್ರಮಾಚರಣೆ ಮತ್ತು ಈಗಿನ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡಿ ಸಂದೇಹಗಳಿಗೆ ಸೂಕ್ತವಾದ ಉತ್ತರ ಪಡೆದು ಆಡಳಿತ ಮಂಡಳಿಯ ಯೋಜನೆಗಳಿಗೆ ಅನುಮೋದನೆ ನೀಡಿ 27ನೇ ಸರ್ವಸದಸ್ಯರ ಸಭೆಗೆ ಹಾಜರಾಗಿ ಈ ಸಭೆಯು ಯಶಸ್ವಿಯಾಗಿ ನಡೆಯಲು ಅನುವು ಮಾಡಿಕೊಟ್ಟ ಎಲ್ಲರಿಗೂ ವಂದನೆ ಸಲ್ಲಿಸಿದರು ಹಾಗೂ ಬೆಳ್ಳಿ ಹಬ್ಬದ ಕಾರ್ಯಕ್ರಮದ ಅಂಗವಾಗಿ ಇಂದು ಸಂಜೆ ಸಾಂಸ್ಕೃತಿಕ ಸಂಗೀತ ರಸಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಹಾಗೂ ಮುಂದೆಯೂ ಇದೇ ರೀತಿಯ ಸಹಕಾರವನ್ನು ನೀಡಬೇಕೆಂದು ಕೋರುತ್ತಾ ತಮ್ಮ ಮಾತುಗಳನ್ನು ಮುಗಿಸಿದರು.

## ವಂದನಾರ್ಪಣೆ

ಸಹಕಾರಿಯ ನಿರ್ದೇಶಕರಾದ ಶ್ರೀ ಮುನಿರಾಜಪ್ಪರವರು ಸಭೆಯ ಅಧ್ಯಕ್ಷರಿಗೂ. ಸಹಕಾರಿಯ ಎಲ್ಲಾ ನಿರ್ದೇಶಕರುಗಳಿಗೂ, ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೂ, ಸಮಯಕ್ಕೆ ಸರಿಯಾಗಿ ಸಲಹೆ, ಸೂಚನೆ ಮಾರ್ಗದರ್ಶನ ನೀಡುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಸಹಕಾರ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ಮತ್ತು ನಮ್ಮ ಸಹಕಾರಿಯ ಸಿಬ್ಬಂದಿ ವರ್ಗದವರಿಗೂ ಹಾಗೂ 27ನೇ ವಾರ್ಷಿಕ ಸಾಮಾನ್ಯ ಸಭೆಯು ಅರ್ಥಪೂರ್ಣವಾಗಿ ನಡೆಯಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ರಾಷ್ಟ್ರಗೀತೆಯೊಂದಿಗೆ 27ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

# ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

(ನೊಂದಣಿ ಸಂಖ್ಯೆ: ಜೆ.ಆರ್.ಬಿ.:ಆರ್.ಜಿ.ಎನ್.: 69:148:2003-04)

ನಂ.29/11, "ಉದಯ ಸಹಕಾರ ಭವನ", 1ನೇ ಮುಖ್ಯ ರಸ್ತೆ, ಮೌಂಟ್ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-560 019

e-mail :udayavithal@gmail.com. Ph: 080-26621893, 080-26600486, 080-26614950.


## ಸಹಕಾರಿಯ 27ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರುಗಳು

**ಶ್ರೀ ಗುಂಡುರಾವ್. ಬಿ.ಎಸ್**
**ಅಧ್ಯಕ್ಷರು**

**ಶ್ರೀ ಚಂದ್ರಶೇಖರ್. ಎನ್**
**ಉಪಾಧ್ಯಕ್ಷರು**

ಶ್ರೀಮತಿ/ಶ್ರೀ

ತೇಜ್ಮಲ್

ಲಕ್ಷ್ಮೀ ಶ್ರೀನಿವಾಸ್

ಬಸವರಾಜೇಗೌಡ

ಹರೀಶ್. ಬಿ.ಎಸ್.

ಜಗದೀಶ್. ಎನ್

ಬಾಪು ನಾಗರಾಜ್

ಶೋಭ ಶೇಷಾದ್ರಿ

ತ್ಯಾಗರಾಜ. ವಿ

ಗಿರಿರಾಜ್. ಕೆ

ರಶ್ಮಿ ಕೃಷ್ಣರಾಜ್

ಸತ್ಯನಾರಾಯಣ. ಸಿ

ಜಯರಾಮ್. ಸಿ. ಆರ್

ಮುನಿರಾಜಪ್ಪ. ಎಂ

ಉಷಾ ಜಗದೀಶ್

# ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

(ನೊಂದಣಿ ಸಂಖ್ಯೆ: ಜೆ.ಆರ್.ಬಿ.:ಆರ್.ಜಿ.ಎನ್.: 69:148:2003-04)

ನಂ.29/11, "ಉದಯ ಸಹಕಾರ ಭವನ", 1ನೇ ಮುಖ್ಯ ರಸ್ತೆ, ಮೌಂಟ್ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-560 019
e-mail :udayavithal@gmail.com. Ph: 080-26621893, 080-26600486, 080-26614950.


## 2022-2023ನೇ ಸಾಲಿನ ವಾರ್ಷಿಕ ವರದಿ:

**"ವ್ಯಕ್ತಿಗಾಗಿ ಸಮಾಜ ಸಮಾಜಕ್ಕಾಗಿ ವ್ಯಕ್ತಿ  ನಾವು ನಿಮಗಾಗಿ ನೀವು ನಮಗಾಗಿ"**

ಎಂಬ ಸಹಕಾರಿಯ ಉದಾತ್ತ ಧ್ಯೇಯೋದ್ದೇಶವನ್ನು ಮೂಲಮಂತ್ರವಾಗಿರಿಸಿಕೊಂಡು ಎಲ್ಲರೊಟ್ಟಿಗೆ ಕೂಡಿ ಬಾಳುವ, ಬೆರೆಯುವ, ಬೆಳೆಸುವ ಹಾಗೂ ಬೆಳೆಯುವ ಸರ್ವತೋಮುಖ ಚಿಂತನೆಯಿಂದ "ಉದಯ"ವಾದ ನಮ್ಮ ಸಹಕಾರಿ ಸಂಸ್ಥೆಯು ಇಂದಿಗೆ 27 ವಸಂತಗಳನ್ನು ಪೂರೈಸಿ 28 ನೇ ವರ್ಷಕ್ಕೆ ಅಮೋಘವಾಗಿ ಕಾಲಿರಿಸಿದೆ.

"ಸಹಕಾರಿಯು ಸಮಾಜದ ಆರ್ಥಿಕತೆಯ ತೊಟ್ಟಿಲು" ಎಂಬ ನಾಣ್ಣುಡಿಯನ್ನು ತನ್ನ ತತ್ವವನ್ನಾಗಿಸಿಕೊಂಡಿರುವ ನಮ್ಮ ಸಹಕಾರಿಯು ತನ್ನ ಸದಸ್ಯ ಬಂಧುಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ಮೂಲ ಗುರಿಯನ್ನಾಗಿಸಿಕೊಂಡು ಸಾಮಾಜಿಕ ಸಬಲೀಕರಣ ಮತ್ತು ಆರ್ಥಿಕತೆಯ ಸುಧಾರಣೆಯ ಹಾದಿಯಲ್ಲಿ ಸಕ್ರಿಯವಾಗಿ ಹೆಜ್ಜೆ ಹಾಕುತ್ತಿದೆ. ಈ ದಿಸೆಯಲ್ಲಿ ಸಂಸ್ಥೆಯ ಆರಂಭದ ದಿನಗಳಿಂದಿಡಿದು ಇಲ್ಲಿಯ ತನಕವೂ ಸಹಕಾರಿಗೆ ಅವಿರತ ಸಹಕಾರವನ್ನು ಒಮ್ಮನಸ್ಸಿನಿಂದ ಹಾಗೂ ಒಕ್ಕೊರಲಿನಿಂದ ನೀಡುತ್ತಾ ಬಂದಿರುವ ಎಲ್ಲಾ ಆತ್ಮೀಯ ಸದಸ್ಯ ಬಂಧುಗಳಿಗೆ ಉದಯಪೂರ್ವಕ-ಕೃತಜ್ಞತೆಗಳೊಂದಿಗೆ ಮನದುಂಬಿದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ಸುಂದರ ಭಾನುವಾರದಂದು ನಮ್ಮ ಸಹಕಾರಿಯ 28 ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ಆಗಮಿಸಿರುವ ಸಹಕಾರಿ ಬಂಧುಗಳಿಗೆ ಆದರದ ಸ್ವಾಗತ ಕೋರುತ್ತಾ 2022-23 ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಪ್ರಸ್ತುತ ಪಡಿಸುತ್ತಿದ್ದೇವೆ. ಈ ಸುಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಸಭೆಯ ಕಾರ್ಯಸೂಚಿಯಂತೆ ಎಲ್ಲಾ ವಿಷಯಗಳಲ್ಲೂ, ಸಕ್ರಿಯರಾಗಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಇಂದಿನ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

**ವರದಿ ಮಂಡಿಸುವ ಮೊದಲು 2022–23 ನೇ ಸಾಲಿನಲ್ಲಿ ಈ ಕೆಳಕಂಡ ಸದಸ್ಯರುಗಳು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.**

| ಕ್ರ ಸಂ | ಸದಸ್ಯರ ಹೆಸರು | ಸದಸ್ಯ ಸಂಖ್ಯೆ |
|---|---|---|
| 1 | ಗೋಪಾಲಕೃಷ್ಣ. ಬಿ | 3590 |
| 2 | ಪ್ರಸನ್ನ ಕುಮಾರ್. ಕೆ | 5230 |
| 3 | ಹನುಮಾನ್. ಎಂ.ಸಿ | 234398 |
| 4 | ರಾಮರಾವ್. ಹೆಚ್.ಎಸ್ | 234667 |
| 5 | ಸುಬ್ರಮಣ್ಯಂ. ಅರ್ | 234959 |
| 6 | ವಿಜಯ ರಾಮಸ್ವಾಮಿ ಹೆಚ್ .ವಿ | 234878 |
| 7 | ಶ್ರೀಪಾದ ರಾವ್. ಕೆ | 236015 |
| 8 | ಮಲ್ಲಿಕಾರ್ಜುನ ಆರ್ . ಎಂ | 234387 |
| 9 | ಸುಮಾ. ಕೆ | 234065 |
| 10 | ರಮಾ ದೇವಿ. ಡಿ.ಎ | 236020 |
| 11 | ಚಂದ್ರಶೇಖರ್. ಎಸ್ | 235252 |
| 12 | ರಾಮಚಂದ್ರ ಜಿ.ಎಸ್ | 23560 |
| 13 | ಕುಮಾರ್ ಟಿ.ಇ | 19570 |
| 14 | ರವಿ ಮೋಹನ್ | 234751 |
| 15 | ವೆಂಕಟಕೃಷ್ಣಯ್ಯ ಶೆಟ್ಟಿ ಎನ್. ಜಿ | 234128 |
| 16 | ಶಿವ ಸ್ವಾಮಿ ಟಿ. ಎಚ್ | 9430 |
| 17 | ವೆಂಕಟೇಶ್ ಜಿ.ವಿ | 150 |
| 18 | ಸುಶೀಲಮ್ಮ | 4890 |
| 19 | ಗಿರಿಜಮ್ಮ | 234861 |
| 20 | ನರಸಿಂಹ ಮೂರ್ತಿ ಎಸ್.ಎಲ್ | 234111 |
| 21 | ಹನುಮಂತರಾವ್ .ಪಿ | 236958 |
| 22 | ಲಲಿತಮ್ಮ .ಕೆ | 236274 |
| 23 | ಪಾರ್ವತಮ್ಮ | 4100 |
| 24 | ಲಕ್ಷ್ಮೀಪತಿ ಕೆ.ವಿ | 236066 |
| 25 | ಸುಬ್ಬ ನರಸಿಂಹಯ್ಯ. ಎನ್ | 13310 |
| 26 | ಕೃಷ್ಣ ಐಯ್ಯಂಗಾರ್. ಡಿ.ಆರ್ | 7280 |

## 2. ಅರ್ಥಿಕ ಸಾಧನೆ :

ಸರಿಸುಮಾರು ರೂ. 5.00 ಲಕ್ಷ ಪಾಲು ಬಂಡವಾಳ ಹಾಗೂ 500 ಸದಸ್ಯರ ಒಗ್ಗೂಡುವಿಕೆಯಿಂದ ಪ್ರಾರಂಭವಾದ ನಮ್ಮ ಸಂಸ್ಥೆಯು, ಇದೀಗ 4382 ಸದಸ್ಯರನ್ನು ಹಾಗೂ ಒಟ್ಟು ಶೇರು ಬಂಡವಾಳ  ರೂ. 2.72 ಕೋಟಿ ಹೊಂದಿರುವುದು ನಮ್ಮ ಪಾಲಿನ ಹೆಮ್ಮೆಯ ಸಂಗತಿಯಾಗಿದೆ. ಹೀಗೆ ಕಳೆದ 28 ವರ್ಷಗಳಿಂದ ಸತತವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ನಮ್ಮ ಸಂಸ್ಥೆಯು ತನ್ನದೇ ಆದ ಛಾಪನ್ನು ಹೊಂದಿರುವುದು ವಿಶೇಷ. ಸಮಕಾಲೀನ ಸಹಕಾರಿ ಸಂಘಗಳು ಆರ್ಥಿಕ ಸಂಕಷ್ಟಗಳಿಗೆ ಗುರಿಯಾಗಿರುವ ನಡುವೆಯೂ ನಮ್ಮ ಸಂಸ್ಥೆಯು ಸಹಕಾರಿ ಕ್ಷೇತ್ರದಲ್ಲಿ ಭದ್ರವಾಗಿ ಬೇರೂರಿ ನಿಂತಿರುವುದು, ನಿಮ್ಮ ನಿರಂತರ ಪ್ರೋತ್ಸಾಹ ಹಾಗೂ ಆಡಳಿತ ಮಂಡಳಿಯ ಪ್ರಾಮಾಣಿಕ ಪರಿಶ್ರಮಕ್ಕೆ ಹಿಡಿದ ಕೈಗನ್ನಡಿಯಾಗಿದೆ

ಮುಖ್ಯವಾಗಿ ನಮ್ಮ ಸಂಸ್ಥೆಯು ಪ್ರಾರಂಭಿಕ ವರ್ಷದಿಂದಲೂ ಲಾಭದಲ್ಲೇ ಸಾಗಿ ಬಂದ್ದಿದ್ದು, ಪ್ರತಿ ವರ್ಷವೂ ತಪ್ಪದೇ ತನ್ನ ಲಾಭಕ್ಕನುಗುಣವಾಗಿ ಸದಸ್ಯರಿಗೆ ಡಿವಿಡೆಂಡ್ ನೀಡಿದೆ. ಹಾಗೂ, ಈ ವರ್ಷವೂ ನಮ್ಮ ಸಂಸ್ಥೆ ತನ್ನ ಲಾಭದ ಓಟವನ್ನು ಮುಂದುವರೆಸಿದ್ದು, ಸಮಂಜಸ ಲಾಭವನ್ನು ಗಳಿಸಿದೆ ಎಂದು ಹೇಳಲು ಹೆಮ್ಮೆ ಪಡುತ್ತೇವೆ.

**ನಮ್ಮ ಐದು ವರ್ಷದ ಆರ್ಥಿಕ ಸಾಧನೆಯ ಸಂಕ್ಷಿಪ್ತ ಅಂಕಿ–ಅಂಶ ಈ ಕೆಳಕಂಡಂತಿದೆ:**

| ಕ. ಸಂ ಖ್ಯೆ | ವರ್ಷ | ಸದಸ್ಯರು | ಷೇರು ಬಂಡವಾಳ ರೂ ಲಕ್ಷಗಳಲ್ಲಿ | ಠೇವಣಿಗಳೂ ರೂ . ಲಕ್ಷಗಳಲ್ಲಿ | ವರದಿ ಸಾಲಿನಲ್ಲಿ ಸಾಲ ವಿತರಣೆ ರೂ. ಲಕ್ಷಗಳಲ್ಲಿ | ಸಾಲ ವಸೂಲಾತಿ ರೂ. ಲಕ್ಷಗಳಲ್ಲಿ | ಕಾಯ್ದಿಟ್ಟ ನಿಧಿ ರೂ. ಲಕ್ಷಗಳಲ್ಲಿ | ನಿವ್ವಳ ಲಾಭ ರೂ. ಲಕ್ಷಗಳಲ್ಲಿ |
|---|---|---|---|---|---|---|---|---|
| 1 | 2018-19 | 4197 | 310.13 | 9507.97 | 4381.44 | 2843.22 | 396.38 | 106.03 |
| 2 | 2019-20 | 4450 | 309.01 | 10848.67 | 3972.42 | 2053.91 | 422.87 | 85.76 |
| 3 | 2020-21 | 4432 | 292.26 | 12648.35 | 996.90 | 1844.80 | 444.31 | 7146 |
| 4 | 2021-22 | 4461 | 282.53 | 10659.04 | 1111.37 | 2136.23 | 462.18 | 101.42 |
| 5 | 2022-23 | 4382 | 271.94 | 10901.74 | 1774.65 | 1568.45 | 487.80 | 137.93 |

ಮೇಲೆ ತಿಳಿಸಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ಸಹಕಾರಿಯು ತನ್ನ ಸದಸ್ಯರಿಗೆ 2022–2023 ನೇ ಸಾಲಿನಲ್ಲಿ ಪ್ರತೀ ರೂ 100 ಷೇರಿಗೆ ರೂ. 50.71ಗಳನ್ನು ಗಳಿಸಿದೆ ಎಂದು ಹೇಳಲು ಹರ್ಷಿಸುತ್ತೇವೆ.

## 3. ಬೆಳ್ಳಿ ಹಬ್ಬ:

ಇಡೀ ಜಗತ್ತನ್ನೇ ಅಂಧಕಾರದಲ್ಲಿ ಮುಳುಗಿಸಿದ್ದ ಕೋವಿಡ್ ಮಹಾಮಾರಿಯಿಂದಾಗಿ ಮುಂದೂಡಲ್ಪಟ್ಟಿದ್ದ ರಜತ ಮಹೋತ್ಸವದ ಕಾರ್ಯಕ್ರಮವನ್ನು ಕಳೆದ ವರ್ಷ ಅತ್ಯಂತ ಸಡಗರದಿಂದ ಸಂಭ್ರಮದಿಂದ ಆಚರಿಸಲಾಯಿತು. ದಿನಾಂಕ 13–07–2022 ರಂದು ಶ್ರೀ ಸತ್ಯನಾರಾಯಣ ಪೂಜಾ ಕೈಂಕರ್ಯದಿಂದಾಗಿ ವಿದ್ಯುಕ್ತವಾಗಿ ಚಾಲನೆಗೊಂಡ ಕಾರ್ಯಕ್ರಮವು ಸಾಂಗೋಪಾಂಗವಾಗಿ ನೇರವೇರಿತು.

ದಿನಾಂಕ 31–07–2022ರಂದು ಬೆಳಗ್ಗೆ 10.30 ಕ್ಕೆ ಸರಿಯಾಗಿ ಸಮಾರಂಭದ ಮುಖ್ಯ ಅತಿಥಿಗಳಾದ, ಮಾನ್ಯ ಸಹಕಾರಿ ಸಚಿವರು, ಶ್ರೀಯುತ ಎಸ್ ಟಿ ಸೋಮಶೇಖರ್ ರವರು, ಬಸವನಗುಡಿ ಕ್ಷೇತ್ರದ ಶಾಸಕರಾದ ಶ್ರೀಯುತ ರವಿಸುಬ್ರಮಣ್ಯರವರು ಮತ್ತು ಹೊಸ ದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಯುತ ಜಯಪ್ರಕಾಶ್ ರವರು, ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀಯುತ ಕೃಷ್ಣಾರೆಡ್ಡಿ, ಇವರುಗಳ ಆಗಮನದೊಂದಿಗೆ, ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಬಿ.ಎಸ್ ಗುಂಡುರಾವ್ ರವರ ಅಧ್ಯಕ್ಷತೆಯಲ್ಲಿ ರಜತ ಮಹೋತ್ಸವದ ಉದ್ಘಾಟನಾ ಸಮಾರಂಭ ನಾಡಗೀತೆಯೊಂದಿಗೆ, ಜ್ಯೋತಿ ಬೆಳಗುವುದರ ಮೂಲಕ ವೈಭವೋಪೇತವಾಗಿ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ಸಹಕಾರಿಯು ಗುರುತಿಸಿದ, ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರುಗಳಾದ ಪದ್ಮಶ್ರೀ ಪುರಸ್ಕೃತ ಶ್ರೀಯುತ ಹರೇಕಳ ಹಾಜಬ್ಬ , ಆಧುನಿಕ ಭಗೀರಥ ರಾಜ್ಯಪ್ರಶಸ್ತಿ ವಿಜೇತ ಶ್ರೀಯುತ ಕಾಮೇಗೌಡ, ಆಧುನಿಕ ಸಾವಯವ ಕೃಷಿ ಪಂಡಿತ ಶ್ರೀಯುತ ವೆಂಕಟೇಶ ಮೂಲಿಮನೆ ಮತ್ತು ವಿಶೇಷ ಒಲಂಪಿಕ್ ಸಾಧಕ ಶ್ರೀ ಸಂದೇಶ್ ಕೃಷ್ಣ ಎಂಬ ಮಹನೀಯರುಗಳನ್ನು ಆಹ್ವಾನಿಸಿ ನೆನಪಿನ ಕಾಣಿಕೆ ಹಾಗೂ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಬೆಳ್ಳಿ ಹಬ್ಬದ ಕಾರ್ಯಕ್ರಮದಲ್ಲಿ ಸಹಕಾರಿಯ ಸಾಧನೆಯ ಕುರಿತು ಮಾತನಾಡಿದ ಮಾನ್ಯ ಸಹಕಾರಿ ಸಚಿವರಾದ ಎಸ್. ಟಿ ಸೋಮಶೇಖರ್ ರವರು, ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸಹಕಾರಿಯನ್ನು ಶ್ಲಾಘಿಸುತ್ತಾ, "ಸಹಕಾರಿ ಕ್ಷೇತ್ರದಲ್ಲಿ ಯಾವುದೇ ಸಹಕಾರಿ ಸಂಸ್ಥೆಯಾದರೂ ಅಲ್ಲಿ ನಿರಂತರ ಸಹಕಾರ ಹಾಗೂ ಪ್ರಾಮಾಣಿಕ ಆಡಳಿತ ಮಂಡಳಿ ಇದ್ದಲ್ಲಿ ಮಾತ್ರ ಈ ರೀತಿಯಾಗಿ ಬೆಳವಣಿಗೆ ಕಾಣಲು ಸಾಧ್ಯ ಎಂದು ಶ್ಲಾಘಿಸಿದರು. ಅಷ್ಟೇ ಅಲ್ಲದೇ ಸುದೀರ್ಘ 26 ವರ್ಷಗಳ ಕಾಲ ಯಾವುದೇ ತಕರಾರಿಲ್ಲದೆ, ಸಮಕಾಲೀನ ಸಂಸ್ಥೆಗಳು ತೊಂದರಗೀಡಾಗಿರುವ ನಡುವೆಯೂ ಪ್ರಾಮಾಣಿಕವಾಗಿ ನೂರಾರು ಕೋಟಿ ಠೇವಣಿ, ಒಂದು ಕೋಟಿ ಮೇಲ್ಪಟ್ಟು ಲಾಭ, ಸುಮಾರು 4 ಸಾವಿರಕ್ಕಿಂತಲೂ ಹೆಚ್ಚು ಸದಸ್ಯರ ಮೆಚ್ಚುಗೆಯನ್ನು ಪಡೆದು, ಒಂದು ವರ್ಷವೂ ತಪ್ಪದಂತೆ ತನ್ನ ಸದಸ್ಯರಿಗೆ ಡಿವಿಡೆಂಡ್ ನೀಡುತ್ತಾ ಬಂದಿರುವ ಸಹಕಾರಿಗೆ ತುಂಬು ಹೃದಯದ ಅಭಿನಂದನೆ ಸಲ್ಲಿಸಿದರು. ಅದರೊಂದಿಗೆ, ಸಂಸ್ಥೆ ಈ ಪರಿಯಲ್ಲಿ ಯಶಸ್ಸು ಪಡೆಯಲು ಕಾರಣೀಭೂತರಾಗಿರುವ ದಕ್ಷ ಅಧ್ಯಕ್ಷರಾದ ಬಿ.ಎಸ್ ಗುಂಡುರಾವ್ ರವರನ್ನು, ಪ್ರಾಮಾಣಿಕ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರನ್ನು ಪ್ರಶಂಸಿಸಿದರು."

ಬಸವನಗುಡಿ ಕ್ಷೇತ್ರದ ಶಾಸಕರಾದ ಶ್ರೀಯುತ ರವಿಸುಬ್ರಮಣ್ಯರವರು ಮಾತನಾಡುತ್ತಾ, "ಸಹಕಾರಿ ಕ್ಷೇತ್ರದಲ್ಲಿನ ಸದಸ್ಯರ ಹಿತಕ್ಕಾಗಿ ಸಮಾಜಮುಖಿಯಾಗಿ ಸಹಕಾರಿಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಆರ್ಥಿಕ ವ್ಯವಹಾರದ ಜೊತೆ ಜೊತೆಗೆ ಗ್ರಾಹಕರ ಹಿತವನ್ನು ಕಾಪಾಡುವಲ್ಲಿ ಯಶಸ್ವಿಯಾಗಿ ಜನಮೆಚ್ಚುಗೆಯನ್ನು ಪಡೆದಿರುವ ವಿಶ್ವಾಸಾರ್ಹ ಸಂಸ್ಥೆಯಾಗಿದೆ" ಎಂದು ಅಭಿನಂದಿಸಿದರು. ಅದರೊಟ್ಟಿಗೆ ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ, ಎಲೆಮರೆಕಾಯಿಯಂತಹ ಸಾಧಕರನ್ನು ಸಹಕಾರಿಯು ಗುರುತಿಸಿ, ದೂರದ ಊರುಗಳಿಂದ ಅವರುಗಳನ್ನು ಆಮಂತ್ರಿಸಿ, ಅತ್ಯಂತ ಗೌರವ ಆದರದಿಂದ ಸನ್ಮಾನಿಸಿದ್ದನ್ನು ವಿಶೇಷವಾಗಿ ಶ್ಲಾಘಿಸಿದರು. ಹೀಗೆ ಸಾಮಾನ್ಯರ ಅಸಾಮಾನ್ಯ ಸಾಧನೆಯನ್ನು ಗುರುತಿಸಿ ಸನ್ಮಾನಿಸುತ್ತಿರುವ ಹಾಗೂ ಈ ರೀತಿ ಹತ್ತು-ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಮುಂಚಿನಿಂದಲೂ ಹಮ್ಮಿಕೊಂಡು ಬರುತ್ತಿರುವ ಸಹಕಾರಿಯ ಸಾಮಾಜಿಕ ಬದ್ಧತೆ ಮತ್ತು ಕಾಳಜಿಯನ್ನು ಮನಃಪೂರ್ವಕವಾಗಿ ಪ್ರಶಂಶಿಸಿ, ಕೋವಿಡ್ ನಡುವೆಯೂ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಸಹಕಾರಿಯ ಕಾರ್ಯವೈಖರಿಯ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.

ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ, ಶ್ರೀಯುತ ಕೃಷ್ಣಾರೆಡ್ಡಿರವರು, ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ " ಸಹಕಾರಿ ಮಂಡಳಿಯ ಆಡಳಿತದಲ್ಲಿ ಪಾರದರ್ಶಕತೆ, ಬದ್ಧತೆ, ಉತ್ತ್ರಮ ಹಣಕಾಸು ನಿರ್ವಹಣೆ, ವೃತ್ತಿಪರತೆ ಹಾಗೂ ಸಿಬ್ಬಂದಿ ವರ್ಗದಿಂದ ಉತ್ತಮ ಗುಣಮಟ್ಟದ ಸೇವೆ ಇವುಗಳನ್ನು ಪಾಲಿಸಿರುವುದರಿಂದ ಸಹಕಾರಿಗೆ ಯಶಸ್ಸು ಲಭ್ಯವಾಗಿದೆ ಎಂದು ಸಂಸ್ಥೆಯ ಪ್ರಾಮಾಣಿಕತೆಯನ್ನು ಮನದುಂಬಿ ಅಭಿನಂದಿಸುತ್ತಾ, ಸದಸ್ಯರಿಗೆ ಆರ್ಥಿಕವಾಗಿ ಸಹಾಯ ಮಾಡುವ ಉದ್ದೇಶದೊಂದಿಗೆ ಆರಂಭವಾಗಿ ರಜತ ಮಹೋತ್ಸವ ವನ್ನು ಪೂರೈಸಿ, ಸತತ 26 ವರ್ಷಗಳ ಕಾಲ ಯಶಸ್ಸಿನ ಹಾದಿಯಲ್ಲಿ ಸಾಗಿ, ಅನೇಕ ಆರ್ಥಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸದಸ್ಯರ ವಿಶ್ವಾಸ ಹಾಗೂ ಮೆಚ್ಚುಗೆಗೆ ಪಾತ್ರವಾಗಿರುವ ಸಹಕಾರಿಯ ಆಡಳಿತ ಮಂಡಳಿಯ ಶ್ರಮವನ್ನು ಶ್ಲಾಘಿಸಿದರು. ಹಾಗೂ ಸಹಕಾರಿಯು ಇದೇ ವಿಶ್ವಾಸವನ್ನು ಉಳಿಸಿಕೊಂಡು ಸೌಹಾರ್ದ ಕಾಯ್ದೆ, ನಿಯಮ ಹಾಗೂ ಉಪವಿಧಿಗಳಿಗನುಗುಣವಾಗಿ ಕಾರ್ಯನಿರ್ವಹಿಸುವ ಮೂಲಕ ಇನ್ನಷ್ಟು ಅಭಿವೃದ್ಧಿ ಹೊಂದಲಿ ಎಂದು ಶುಭ ಹಾರೈಸಿದರು.

ಈ ಶುಭ ಸಂದರ್ಭದಲ್ಲಿ ಅತಿಥಿ ಗಣ್ಯರನ್ನು ಹಾಗೂ ಪ್ರಶಸ್ತಿ ವಿಜೇತರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು ಮತ್ತು ಉದಯ ರಜತೋತ್ಸವ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಮುಖ್ಯವಾಗಿ ರಜತ ಸಮಾರಂಭದಲ್ಲಿ ಸಂಯುಕ್ತ ಸಹಕಾರಿ ಕ್ಷೇತ್ರದ ಧುರೀಣರ, ಸಹಕಾರಿ ಸಂಸ್ಥೆಗಳ ಅಧ್ಯಕ್ಷರುಗಳ, ಉಪಾಧ್ಯಕ್ಷರುಗಳ ಉಪಸ್ಥಿತಿಯೊಂದಿಗೆ ಸದಸ್ಯ ಬಂಧುಗಳ, ಅತಿಥಿಗಳ, ಪ್ರಾಯೋಜಕರುಗಳ, ಮಾಧ್ಯಮ ವರ್ಗದವರ ಆಗಮನವಾಗಿದ್ದು ವಿಶೇಷವಾಗಿತ್ತು.

ರಜತ ಮಹೋತ್ಸವದ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಖ್ಯಾತ ಕೊಳಲು ವಾದಕ ವಿದ್ವಾನ ಪ್ರವೀಣ್ ಗೋಡ್ಖಿಂಡಿಯವರ ಕೃಷ್ಣ ಫ್ಯೂಷನ್ ತಂಡದ ಕೊಳಲು ವಾದನ ನೆರೆದಿದ್ದ ಪ್ರೇಕ್ಷಕರನ್ನು ಸಂಗೀತ ಸಾಗರದಲ್ಲಿ ತೇಲಿಸಿತ್ತು.

ಮುಂಗಾರು ಮಳೆಯ ತುಂತುರು ಹನಿಗಳೊಂದಿಗೆ, ಬಗೆಬಗೆಯ ವಿಶೇಷ ಔತಣದೊಂದಿಗೆ ಉದಯ ರಜತೋತ್ಸವ ಸಮಾರಂಭ ಯಶಸ್ವಿಯಾಗಿ ಮಿಂಚಲ್ಲಿ ಮರೆಯಾಗಿ ಸಿಹಿನೆನಪುಗಳ ತಾರೆಗಳು ಸಹೃದಯರ ಹೃದಯಗಳಲ್ಲಿ ಶಾಶ್ವವಾಗಿ ನೆಲೆಸುವಂತೆ ಮಾಡಿತು.

**ಸಹಕಾರ ರತ್ನ ಪ್ರಶಸ್ತಿ**

ದಿನಾಂಕ 19-01-2022 ರಂದು ನಡೆದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ನಮ್ಮ ಉದಯ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರು ಆದ ಶ್ರೀ ಬಿ.ಎಸ್. ಗುಂಡುರಾವ್ ರವರಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತದ ವತಿಯಿಂಥ, ಶ್ರೀಯುತರು ಕರ್ನಾಟಕ ರಾಜ್ಯ ಸಹಕಾರ ಚಳುವಳಿಯ ಬೆಳವಣಿಗೆಗೆ ಸಲ್ಲಿಸಿರುವ ಅನುಪಮ ಸೇವೆಯನ್ನು ಗುರುತಿಸಿ **'ಸಹಕಾರ ರತ್ನ ಪ್ರಶಸ್ತಿ'** ನೀಡಿ ಗೌರವಿಸಲಾಯಿತು. ಇದು ಸಹಕಾರಿಯ ಪಾಲಿನ ಹೆಮ್ಮೆಯ ವಿಷಯವಾಗಿದೆ.

## 4. ಸಾಮಾಜಿಕ ಕಾರ್ಯಕ್ರಮಗಳು:

**ರಾಮನವಮಿ:**

ನಮ್ಮ ಸಹಕಾರಿ ಸಂಸ್ಥೆಯ ಬಹುದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮವಾದ ಶ್ರೀ ರಾಮನವಮಿ ಹಬ್ಬವನ್ನು ಕಳೆದೆರೆಡು ವರ್ಷಗಳಿಂದ ಕೋವಿಡ-19 ಕಾರಣದಿಂದಾಗಿ ಸರಳವಾಗಿ ಆಚರಿಸಲಾಗಿತ್ತು. ಆದರೆ, ಈ ವರ್ಷ ನಾವು ಈ ಮೊದಲು ನಡೆಸಿಕೊಂಡು ಬಂದಿರುವಂತೆ ಸಹಕಾರಿ ಕಛೇರಿಯ ಹತ್ತಿರ ಸಾರ್ವಜನಿಕರಿಗೆ ಪ್ರಸಾದ ವಿತರಣೆ ಮಾಡುವ ಮುಖಾಂತರ ಶ್ರೀ ರಾಮನವಮಿ ಕಾರ್ಯಕ್ರಮವನ್ನು ಅತ್ಯಂತ ವಿನಮ್ರವಾಗಿ ಹಾಗೂ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಬಿರು ಬೇಸಿಗೆಯಲ್ಲಿ ವಿಧ-ವಿಧವಾದ ಪ್ರಸಾದಗಳ ಸವಿದ ಸಾರ್ವಜನಿಕರ ತೃಪ್ತಭಾವವನ್ನು ಕಂಡು ಈ ಕಾರ್ಯಕ್ರಮ ಸಾರ್ಥಕವೆನಿಸಿತು.

**ಮಹಿಳಾ ದಿನಾಚರಣೆ:**

ಸಹಕಾರಿಯು ಪ್ರತಿ ವರ್ಷ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಹೊಚ್ಚ-ಹೊಸದಾಗಿ 'ಮಹಿಳಾ ದಿನಾಚರಣೆ' ಕಾರ್ಯಕ್ರಮವನ್ನು ಸೇರಿಸಲಾಯಿತು. ಮೊದಲಿನಿಂದಲೂ ಮಹಿಳಾ ಸಬಲೀಕರಣ, ಆರ್ಥಿಕ ಸ್ವಾತಂತ್ರಕ್ಕೆ ಒತ್ತು ಕೊಡುತ್ತಾ ಬಂದಿರುವ ಸಹಕಾರಿಯು, ಮಹಿಳಾ ಸದಸ್ಯ ಬಂಧುಗಳನ್ನು ಈ ಕಾರ್ಯಕ್ರಮದ ಕೇಂದ್ರಬಿಂದುವನ್ನಾಗಿಸಿ, ಮಹಿಳಾ ನಿರ್ದೇಶಕರಿಗೆ ಮತ್ತು ಸಿಬ್ಬಂದಿಗಳಿಗೆ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ಹಾಗೂ ಅದರ ತಯಾರಿಗೆ ಬೇಕಾದ ಸಿದ್ದತೆಗಳಿಗೆ ಸಹಕರಿಸುವುದಾಗಿ ಹೇಳಿ ಸರಳ-ಸುಂದರ ಕಾರ್ಯಕ್ರಮದ ಯೋಜನೆಯನ್ನು ರೂಪಿಸಿತು, ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳನ್ನಾಗಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಡಾ॥ ಎಸ್. ಆರ್. ಲೀಲಾ ಹಾಗೂ ಪ್ರಸೂತಿ ತಜ್ಞರಾದ ಡಾ ॥ ಅರುಣ ಮುರಳೀಧರ್ ರವರನ್ನು ಆಹ್ವಾನಿಸಿ ಸತ್ಕರಿಸಲಾಯಿತು. ಆಗಮಿಸಿದ್ದ ಅತಿಥಿಗಳು ನೆರೆದಿದ್ದ ಮಹಿಳೆಯರನ್ನು ಉದ್ದೇಶಿಸಿ ಉಪಯುಕ್ತ ಮಾಹಿತಿ ಹಾಗೂ ಸಲಹೆಗಳನ್ನು ನೀಡಿದರು. ಒಟ್ಟಿನಲ್ಲಿ ಮನೋರಂಜನಾತ್ಮಕವಾಗಿಯೂ ಹಾಗೂ ಮಾಹಿತಿದಾಯಕವೂ ಆಗಿದ್ದ ಕಾರ್ಯಕ್ರಮವೂ ಯಶಸ್ವಿಯಾಗಿ ಮುಕ್ತಾಯವಾಯಿತು.

**ಸಹಕಾರಿಯ ಹಿರಿಯ ಸದಸ್ಯರಿಗೆ ಸನ್ಮಾನ:**

ನಮ್ಮ ಸಂಸ್ಥೆಯು ಪ್ರಾರಂಭವಾದ 27 ವರ್ಷಗಳಿಂದಲೂ, ಸಂಸ್ಥೆಯ ಅಭಿವೃದ್ಧಿಯಲ್ಲಿ ಹಿರಿಯ ನಾಗರೀಕರದ್ದು ವಿಶೇಷ ಪಾಲು, ಸಹಕಾರಿಯ ಸೇವೆಯನ್ನು ಪ್ರಶಂಶಿಸುತ್ತಾ, ತಪ್ಪುಗಳನ್ನು ತಿದ್ದುತ್ತಾ, ಸಲಹೆಗಳನ್ನು ನೀಡುತ್ತಾ ಜೊತೆಯಾಗಿ ಸಾಗಿದ ಹಿರಿಯ ನಾಗರೀಕರಿಗೆ ಸನ್ಮಾನ ಸಮಾರಂಭ. ನಮ್ಮ ಸಹಕಾರಿಯು ಪ್ರತಿ ವರ್ಷ 10 ಹಿರಿಯ ಸದಸ್ಯ ಬಂಧುಗಳನ್ನು ಗುರುತಿಸಿ, ಗಣ್ಯರಿಂದ ಸನ್ಮಾನ, ಗೌರವ. ಸನ್ಮಾನಿತ ಹಿರಿಯ ಸದಸ್ಯ ಕುಟುಂಬದವರಿಂದ ಸಂತೋಷ, ಉಲ್ಲಾಸ, ಈ ವಿಶೇಷ ಸಂದರ್ಭದಲ್ಲಿ ಕಾಣಬಹುದಾಗಿರುತ್ತದೆ. ಮನಸ್ಸಿಗೆ ಸಮಾಧಾನ, ನಮ್ಮ ಸಹಕಾರಿಗೆ ಹಿರಿಯ ಸದಸ್ಯ ಬಂಧುಗಳಿಂದ ಆಶೀರ್ವಾದ, ಕೆಲವು ಪ್ರಶಂಸನೀಯ ಹಿತನುಡಿ, ಈ ಸಂತೋಷ ಸಮಾರಂಭವನ್ನು ಹಮ್ಮಿಕೊಳ್ಳುವುದು ನಮ್ಮ ಹೆಮ್ಮೆಯ ವಿಷಯವೇ ಸರಿ. ರಜತ ಮಹೋತ್ಸವ ಸಂದರ್ಭದಲ್ಲಿ ಸಹಕಾರಿಯ ಹಿರಿಯ ಸದಸ್ಯರುಗಳನ್ನು ಗೌರವಿಸಲಾಯಿತು.

**ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣಕ್ಕೆ ನೆರವು:**

ಭಾರತೀಯರು ಇಂದು ವಿಜ್ಞಾನ, ತಂತ್ರಜ್ಞಾನ, ಕಲೆ, ಸಾಹಿತ್ಯ, ಕ್ರೀಡೆ, ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದ್ದಾರೆ. ಇಂದಿನ ಯುವಪೀಳಿಗೆ ನಮ್ಮ ದೇಶದ ಮುಂದಿನ ಭವಿಷ್ಯವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಸಹಕಾರಿಯ ಸದಸ್ಯರನ್ನು, ಸದಸ್ಯರ ಮಕ್ಕಳನ್ನು ಪ್ರೋತ್ಸಾಹಿಸಿ, ಪೋಷಿಸಿ, ಹಾರೈಸಿ, ನೆರವು ನೀಡುವುದನ್ನು ನಮ್ಮ ಸಹಕಾರಿಯು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಮೂಲಕ ಉತ್ತಮ ಸಾಧನೆಗಾಗಿ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸುವ ಮೂಲಕ, ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ.

ಈ ಸಂದರ್ಭದಲ್ಲಿ ನಮ್ಮ ಸಹಕಾರಿಯು ಕೆಲವೊಂದು ಆಯ್ದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಆರ್ಥಿಕವಾಗಿ ವಿದ್ಯಾರ್ಥಿಗಳ ಶಾಲಾ ಶುಲ್ಕ ಕಟ್ಟಲು ಸಂಬಂದಿಸಿದ ಶಾಲೆಗಳಿಗೆ ಮತ್ತು ವಿಕಲಚೇತನಾ ಮಕ್ಕಳ ಪೋಷಣಾ ಸಂಸ್ಥೆಗೆ ಆರ್ಥಿಕ ಧನ ಸಹಾಯ ನೀಡಲಾಯಿತು.

ಕಳೆದ 2021–22ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರಂನ ಮೇಲ್ವಿಚಾರಕರಾದ ಶ್ರೀ ಸ್ವಾಮಿ ತದ್ಯುಕ್ತಾನಂದಜೀ ಮಹಾರಾಜ್ ರವರು ಆಗಮಿಸಿ ತಮ್ಮ ಅನುಭವಗಳು ಮತ್ತು ತಮ್ಮ ಜೀವನದ ಸಂಗತಿಗಳನ್ನು ಉದಾಹರಣೆಗಳ ಸಹಿತ ವಿವರಿಸಿ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಹಿತವಚನಗಳನ್ನು ತಿಳಿಸಿದರು. ಹಾಗೂ ನಮ್ಮ ಸಂಸ್ಥೆಯ ಕಾರ್ಯ ವೈಖರಿಯನ್ನು ಶ್ಲಾಘಿಸಿ ಸಂಸ್ಥೆಯು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಲಿ ಎಂದು ಹಾರೈಸಿದರು.

**ಸಹಕಾರಿಯ ಸಿಬ್ಬಂದಿ – ಸನ್ಮಾನ:**

ಸೇವಾ ಹಿರಿತನದ ಆದ್ಯತೆಯ ಆಧಾರದ ಮೇಲೆ, ಸಂಸ್ಥೆಗೆ ನಿರಂತರವಾಗಿ ಹಾಗೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತ ಬಂದಿರುವ ಸಿಬ್ಬಂದಿಯನ್ನು ಗುರುತಿಸಿ, ನೆನಪಿನ ಕಾಣಿಕೆ ಹಾಗೂ ಗೌರವಧನವನ್ನು ನೀಡಿ ಸನ್ಮಾನಿಸುವುದರ ಮೂಲಕ ಹುರಿದುಂಬಿಸಲಾಗುತ್ತಿದೆ. ರಜತ ಮಹೋತ್ಸವ ಸಂದರ್ಭದಲ್ಲಿ ನಮ್ಮ ಸಿಬ್ಬಂದಿಯಲ್ಲಿ ಒಬ್ಬರಾದ ಶ್ರೀ. ಯೋಗೇಶ್ ರವರನ್ನು ಸನ್ಮಾನಿಸಲಾಯಿತು.

**5. ಸಹಕಾರಿಯ ಪ್ರಚಲಿತ ಸೌಲಭ್ಯಗಳು:**

**ಭದ್ರತಾ ಕಪಾಟುಗಳು :**

ಸಹಕಾರಿಯು ತನ್ನ ಸ್ವಂತ ಕಟ್ಟಡದಲ್ಲಿ ಸುಸಜ್ಜಿತವಾಗಿ, ಹೆಚ್ಚಾಗಿ ಸುರಕ್ಷಿತ ದೃಷ್ಟಿಯಿಂದ ನಿರ್ಮಿಸಿರುವ ಭದ್ರಾತ ಕಪಾಟುಗಳ ಸೌಲಭ್ಯವನ್ನು, ಈಗಾಗಲೇ ಹಲವಾರು ಸದಸ್ಯರು ಉಪಯೋಗಿಸಿಕೊಳ್ಳುತ್ತಿದ್ದು, ಉಳಿದ ಸದಸ್ಯರು ಈ ಸೌಲಭ್ಯದ ಪ್ರಯೋಜನ ಪಡೆಯಬಹುದಾಗಿದೆ.

**ಡಯಾಗ್ನೋಸ್ಟಿಕ್ ಸೆಂಟರ್:**

ಸಹಕಾರಿಯ ಸ್ವಂತ ಕಟ್ಟಡದಲ್ಲಿ ಡಯಾಗ್ನೋಸ್ಟಿಕ್ ಕೇಂದ್ರ ನಿರ್ಮಿಸಬೇಕೆಂಬ ಬಹುದಿನದ ಕನಸು ನನಸಾಗಿದೆ. ಯಾವುದಾದರೊಂದು ಉತ್ತಮ ಡಯಾಗ್ನೋಸ್ಟಿಕ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಸದಸ್ಯರಿಗೆ ತಪಾಸಣಾ ವೆಚ್ಚದಲ್ಲಿ ರಿಯಾಯಿತಿ ಒದಗಿಸಬೇಕೆಂಬ ಉದ್ದೇಶದಿಂದ ಹುಟ್ಟಿದ ಈ ಯೋಜನೆಯು ಯಶಸ್ವಿಯಾಗಿದ್ದು ಇದರ ತತ್ಪರಿಣಾಮವಾಗಿ ಸಹಕಾರಿಯ ಕೆಳ ಅಂತಸ್ತಿನಲ್ಲಿ 'ಅಪೂರ್ವ ಡಯಾಗ್ನೋಸ್ಟಿಕ್ ಸೆಂಟರ್' ತಲೆ ಎತ್ತಿ ನಿಂತಿದೆ. ಸದಸ್ಯರನ್ನು ಸೇರಿಸಿದಂತೆ ಸಾರ್ವಜನಿಕರು ಇದರ ಸೌಲಭ್ಯ ಪಡೆಯಬಹುದಾಗಿದೆ:

**ಮರಣೋತ್ತರ ಪರಿಹಾರ ನಿಧಿ:**

ದಿವಂಗತ ಸೂರ್ಯನಾರಾಯಣರವರ ಹೆಸರಿನಲ್ಲಿ ಸ್ಥಾಪಿತವಾದ ಮರಣೋತ್ತರ ಪರಿಹಾರ ನಿಧಿಯಲ್ಲಿ ತೊಡಗಿಸಿಕೊಂಡ ಸದಸ್ಯರ ಕುಟುಂಬದವರಿಗೆ ಪರಿಹಾರ ಧನವನ್ನು ನೀಡಲಾಗುತ್ತಿದ್ದು, ಇದರಿಂದ ಹಲವಾರು ಸದಸ್ಯರು ಆರ್ಥಿಕ ನೆರವನ್ನು ಪಡೆದಿರುತ್ತಾರೆ. ಒಂದು ಬಾರಿ ರೂ 2500/– ಗಳನ್ನು ನೀಡಿ ಈ ಯೋಜನೆಯಲ್ಲಿ ತೊಡಗಿಸಿಕೊಂಡಲ್ಲಿ, ಆ ಸದಸ್ಯನು ಮರಣ ಹೊಂದಿದಲ್ಲಿ, ಆತನು ಸೂಚಿಸಿರುವ ನಾಮಿನಿಗೆ ರೂ.25000/– ಗಳ ಪರಿಹಾರವನ್ನು ಮರಣೋತ್ತರ ನಿಧಿಯಿಂದ ನೀಡಲಾಗುವುದು. ಇದು ನಮ್ಮ ಸಹಕಾರಿಯ ಯಶಸ್ವಿ ಯೋಜನೆಗಳಲ್ಲೊಂದಾಗಿದ್ದು, ಯಾವುದೇ ವಿಮಾ ಕಂಪನಿಗಳೊಂದಿಗೆ ನಾವು ಒಪ್ಪಂದ ಮಾಡಿಕೊಂಡಿರುವುದಿಲ್ಲ. ಎಲ್ಲಾ ಸದಸ್ಯರು ಇದರ ಅನುಕೂಲತೆಯನ್ನು ಪಡೆಯಲು ಕೋರಲಾಗಿದೆ.

**ಸಾಲ ಸೌಲಭ್ಯ ಮತ್ತು ಠೇವಣಿ ಸಂಗ್ರಹಣೆ:**

ಸಹಕಾರಿಯ ಸದಸ್ಯರುಗಳಿಗೆ ವಿವಿಧ ರೀತಿಯ ಠೇವಣಿ ಯೋಜನೆಗಳು ಜಾರಿಯಲ್ಲಿದ್ದು ಠೇವಣಿದಾರರಿಗೆ ಕಾಲಕ್ಕೆ ಸರಿಯಾಗಿ ಬಡ್ಡಿ ಪಾವತಿಸಲಾಗುತ್ತಿದೆ. ನಮ್ಮ ಸಹಕಾರಿಯಿಂದ ಆಸ್ತಿ ಆಧಾರ ಸಾಲ ಮತ್ತು ಜಾಮೀನು ಸಾಲವನ್ನು ಅನೇಕ ಸದಸ್ಯರು ಪಡೆದುಕೊಂಡಿರುತ್ತಾರೆ. ಸರಿಯಾದ ಸಮಯಕ್ಕೆ ನಿಯಮಿತ ಕಂತುಗಳನ್ನು ಪಾವತಿಸಿದ ಸದಸ್ಯರುಗಳಿಗೆ ಸಹಕಾರಿಯ ಶೇ.1% ಬಡ್ಡಿ ರಿಯಾಯಿತಿಯನ್ನು ನೀಡುತ್ತಿದೆ. ಅನೇಕ ಸದಸ್ಯರು ಇದರ ಫಲಾನುಭವುಗಳಾಗಿದ್ದಾರೆ. ಎಲ್ಲಾ ಸಾಲ ಪಡೆದ ಸದಸ್ಯರು ಸಾಲದ ಕಂತುಗಳನ್ನು ಕರಾರುವಕ್ಕಾಗಿ ಮರುಪಾವತಿ ಮಾಡುವುದರಿಂದ ಸಕಾಲಕ್ಕೆ ಠೇವಣಿದಾರರಿಗೆ ಬಡ್ಡಿ ನೀಡಲು ಸಹಾಯವಾಗುತ್ತದೆ. ಸಹಕಾರಿಯ ಪ್ರಗತಿಯ ಜೊತೆಗೆ ಸದಸ್ಯರು ಅಭಿವೃದ್ಧಿ ಹೊಂದುವುದು ನಮ್ಮ ಉದ್ದೇಶವಾಗಿದೆ ಆದ್ದರಿಂದ ಸದಸ್ಯರುಗಳು ಸುಸ್ತಿದಾರರಾಗದೆ ನಿಗದಿತ ದಿನಾಂಕದೊಳಗೆ ಸಾಲದ ಕಂತುಗಳನ್ನು ಮರುಪಾವತಿಸಿ ಇತರರಿಗೆ ಮಾದರಿಯಾಗಲಿ ಎಂಬುದು ಸಹಕಾರಿಯ ಆಶಯವಾಗಿರುತ್ತದೆ.

**ಚೀಟಿ ಯೋಜನೆ ಸೌಲಭ್ಯ:**

ನಮ್ಮ ಸಹಕಾರಿಯು ಪ್ರಮುಖವಾಗಿ ಚೀಟಿ ವ್ಯವಹಾರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದು ವರದಿ ಸಾಲಿನ ವರ್ಷಾಂತ್ಯಕ್ಕೆ 17 ಗುಂಪುಗಳಾಗಿದ್ದು 01 ಲಕ್ಷದಿಂದ 15 ಲಕ್ಷದ ವರೆಗಿನ ಚೀಟಿಗಳಲ್ಲಿ ಸುಮಾರು 680 ಸದಸ್ಯರುಗಳು ಚಂದಾದಾರರಾಗಿರುತ್ತಾರೆ. ಬಹಳಷ್ಟು ಸದಸ್ಯರು ಈ ಯೋಜನೆಯಲ್ಲಿ ಪಾಲ್ಗೊಂಡು ಅನುಕೂಲತೆಗಳನ್ನು ಪಡೆದುಕೊಂಡಿರುತ್ತಾರೆ. ನಮ್ಮ ಸಂಸ್ಥೆಯು ಚೀಟಿ ವ್ಯವಹಾರಗಳಿಂದ ಈ ವರ್ಷ 46.30ಲಕ್ಷ ರೂಗಳ ನಿವ್ವಳ ಲಾಭವನ್ನು ಗಳಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇವೆ.

**6. ಸಹಕಾರಿಯ ಮುಂದಿನ ಯೋಜನೆಗಳು:**

ಸಹಕಾರಿಯ ಚೀಟಿ ವ್ಯವಹಾರದಲ್ಲಿ ಹೆಚ್ಚಿನ ಸದಸ್ಯರುಗಳು ಚಂದದಾರರಾದ ಪರಿಣಾಮ ನಮ್ಮ ಸಹಕಾರಿಯು ಚೀಟಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸಿದೆ. ಇದರಿಂದ ಉತ್ತೇಜನಗೊಂಡಿರುವ ಸಹಕಾರಿಯು, ನಮ್ಮ ಸದಸ್ಯರುಗಳ ಆರ್ಥಿಕ ಅಭಿವೃದ್ಧಿಗಾಗಿ ಮತ್ತಷ್ಟು ಹೊಸ–ಹೊಸ ಚೀಟಿ ಗುಂಪುಗಳನ್ನು ಪ್ರಾರಂಭಿಸುವ ಯೋಜನೆಯನ್ನು ಹೊಂದಿದೆ. ಹೀಗೆ ಸಹಕಾರಿಯು ಚೀಟಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವ ಮುಖಾಂತರ ಸಾಲದ ವಿಭಾಗದ ಮೇಲಿನ ಅವಲಂಬನೆಯನ್ನು ಕಡಿಮೆಮಾಡಿಕೊಳ್ಳುವ ಗುರಿಯನ್ನು ಹೊಂದಿದೆ.

ಅದರಂತೆ ಸಹಕಾರಿಯು ತನ್ನ ಆರ್ಥಿಕ ವ್ಯವಹಾರಗಳನ್ನು ಹೆಚ್ಚಿಸಿಕೊಳ್ಳಲು ಹಾಗೂ ಸದಸ್ಯರಿಗೆ ಅನುಕೂಲವಾಗಲೆಂದು – ಚಿನ್ನಾಭರಣಗಳ ಮೇಲೆ ಸಾಲ ನೀಡುವ (Gold Loan) ಯೋಜನೆ ಯನ್ನು ಮುಂದಿನ ವರ್ಷಗಳಲ್ಲಿ ಜಾರಿಗೆ ತರುವ ಯೋಚನೆಯನ್ನು ಹೊಂದಿದೆ.

ನಮ್ಮ ಸಹಕಾರಿಯಲ್ಲಿ ಪತ್ತಿನ ಚಟುವಟಿಕೆಗಳಲ್ಲದೇ ಚೀಟಿ ವ್ಯವಹಾರ ಮಾತ್ರ ನಡೆಸಲಾಗುತ್ತಿದೆ. ಇತರೇ ಬಡ್ಡಿಯೇತರ ವ್ಯವಹಾರ ನಡೆಸಿದಲ್ಲಿ ಸಹಕಾರಿಯು ಇನ್ನೂ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಬಹುದಾಗಿರುತ್ತದೆ. ಅಲ್ಲದೇ ನಮ್ಮ ಸಹಕಾರಿಯ ಸದಸ್ಯರುಗಳಿಗೂ ಅದರಿಂದ ಅನೇಕ ಸೌಲಭ್ಯ ಒದಗಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಪತ್ತಿನ ಸೌಹಾರ್ದ ಸಹಕಾರಿ ಸಂಘವನ್ನು ಸೌಹಾರ್ದ ಸಹಕಾರಿ ಸಂಘವಾಗಿ ಪರಿವರ್ತಿಸಿ ವಿವಿಧ ಉದ್ದೇಶಗಳು ಮತ್ತು ಧ್ಯೇಯಗಳನ್ನು ಈಡೇರಿಸಲು ಉಪನಿಯಮ ತಿದ್ದುಪಡಿ ಮಾಡಿ ವಿವಿಧ ಯೋಜನೆಗನುಗುಣವಾಗಿ ಜಾರಿಗೆ ತರುವ ಉದ್ದೇಶ ಹೊಂದಲಾಗಿದೆ.

ಒಟ್ಟಿನಲ್ಲಿ, ಸಹಕಾರಿಯ ಎಲ್ಲಾ ಯೋಜನೆಗಳಿಗೆ ನಮ್ಮ ಸಕಲ ಸದಸ್ಯರ ಸಹಕಾರವಿರುತ್ತದೆ ಎಂದು ನಂಬಿರುತ್ತೇವೆ.

ಸಂಘದ ವ್ಯವಹಾರದಲ್ಲಿ ಸಹಕರಿಸುತ್ತಿರುವ ಠೇವಣಿ ಸದಸ್ಯರಿಗೂ, ಸಾಲ ಪಡೆದು ಕ್ರಮವಾಗಿ ಪಾವತಿಸುತ್ತಿರುವ ಸದಸ್ಯರಿಗೂ, ಚೀಟಿ ಸದಸ್ಯರಿಗೂ, ಇಲಾಖಾಧಿಕಾರಿಗಳಿಗೂ, ಕಾನೂನೂ ಸಹೆಗಾರರಿಗೂ, ಸಿಬ್ಬಂದಿವರ್ಗಕ್ಕೂ, ಲೆಕ್ಕ ಪರಿಶೋಧನಾಧಿಕಾರಿಗಳಿಗೂ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳು.

ಆಡಳಿತ ಮಂಡಳಿಯ ಪರವಾಗಿ,

**(ಗುಂಡುರಾವ್. ಬಿ.ಎಸ್)**

ಅಧ್ಯಕ್ಷರು